# 12

# ಭೂಮಿಯ ಮೇಲಿನ ನಿನ್ನ ಕೊನೆಯ ದಿನಗಳನ್ನು ನೀನು ಹೇಗೆ ಕಳೆಯಬೇಕು

## (2 ಅರಸು 2:1-18)

ನಾವು ಎಲೀಯನ ಸರಣಿಯ ಅಂತ್ಯದಲ್ಲಿ ಬಂದಿದ್ದಕ್ಕೆ ನನಗೆ ಸ್ವಲ್ಪ ದುಃಖವಿದೆ. ನಾನು ನನ್ನ ಅಧ್ಯಯನವನ್ನು ಪ್ರಾರಂಭಿಸಿದಾಗಿನಿಂದಲೂ ಎಲೀಯನು ಸಹಜವಾಗಿ ಪರಿಚಯವಿರುವವನಾಗಿದ್ದಾನೆ. ಅನೇಕ ತಿಂಗಳುಗಳಿಂದ ನಾನು ಆತನನ್ನು ತಿಳಿಯುತ್ತಾ ಬಂದದರಿಂದ ಆತನನ್ನು ನನ್ನ ಸ್ನೇಹಿತ ಎಂದು ಯೋಚಿಸಿದ್ದೇನೆ.

2 ಅರಸು 2:1-18ರಲ್ಲಿ, ಒಂದು ನಾಟಕೀಯ ದೃಷ್ಯವಿದೆ, ಆದರೆ ಅದು ಕೇವಲ ನಾಟಕೀಯವಾದದ್ದು ಅಲ್ಲ, ಆ ಭಾಗದಲ್ಲಿರುವ ಅಂತ್ಯವು ಪ್ರತಿಯೊಬ್ಬರ ಜೀವನದಲ್ಲಿ ಕೊಡಲ್ಪಟ್ಟಿದೆ. ಜಗತ್ತಿನ ಇತಿಹಾಸದಲ್ಲಿ, ಇಬ್ಬರು ಮಾತ್ರ ಸಾಯದೆ ಹಾಗೆಯೇ ನೇರವಾಗಿ ಪರಲೋಕಕ್ಕೆ ಹೋದರು ಹನೋಕನು (ಆದಿಕಾಂಡ 5) ಮತ್ತು ಎಲೀಯ (2 ಅರಸು 2).

ಎಲೀಯನ ಜೀವಿತವು ಇದಕ್ಕಿಂತ ವಿಭಿನ್ನ ರೀತಿಯಲ್ಲಿ ಹೇಗೆ ಅಂತ್ಯಗೊಳ್ಳಬಹುದು ಎಂದು ನಾವು ನಿರೀಕ್ಷಿಸಬಹುದು? ಆತನು ಆಕಾಶದಿಂದ ಬೆಂಕಿಯನ್ನು ಶಕ್ತಿಯನ್ನು ಹೊಂದಿದಾಗ ತನ್ನ ಯಾವ ವೈರಿಗಳಿಂದ ಕೊಲ್ಲಲ್ಪಡಲಿಲ್ಲ. ಇನ್ನೊಂದೆಡೆಯಲ್ಲಿ ಮರಣಶಯ್ಯೆಯಲ್ಲಿ ನಿಸ್ತೇಜನಾಗಿ ಹಾಸಿಗೆಯ ಮಧ್ಯೆ ಆತನನ್ನು ಊಹಿಸಿಕೊಳ್ಳುವದು ನಮಗೆ ಕಷ್ಟಸಾಧ್ಯವಾದುದು. ಆತನು ಅಸಮಾನ್ಯ ಜೀವಿತವನ್ನು ಜೀವಿಸಿದವನು, ಮತ್ತು ಜೀವಿತದ ಅಸಾಧಾರಣವಾದ ಸಮಾರೋಪವನ್ನು ಹೊಂದಿಕೊಂಡಂತವನೂ ಆಗಿದ್ದನು.

"ಭೂಮಿಯ ಮೇಲಿನ ನಿನ್ನ ಕೊನೆಯ ದಿನಗಳನ್ನು ನೀನು ಹೇಗೆ ಕಳೆಯಬೇಕು" ಎಂಬುದನ್ನು ಈಗ ಗಮನಿಸುವಾ. 2 ಅರಸು 2:1-18 ಎಲೀಯನು ತನ್ನ ಕೊನೆಯ ದಿನಗಳನ್ನು ಹೇಗೆ ಕಳೆದನು ಎಂಬುದು ನಮಗೆ ತಿಳಿಸಲ್ಪಟ್ಟಿದೆ.

ಈ ಭೂಮಿಯಲ್ಲಿ ನಾಳೆಯೇ ನಿನ್ನ ಕೊನೆಯ ದಿನ ಎಂದು ನಿಮಗೆ ನಿಸ್ಸಂಶಯವಾಗಿ ಹೇಳಲ್ಪಟ್ಟರೆ ನೀನು ಆ ದಿನವನ್ನು ಹೇಗೆ ಕಳೆಯುವಿ? ಈ ಪ್ರಶ್ನೆಯು ಯಾವಾಗಲೂ ಜನರ ಆಸಕ್ತಿಯನ್ನು ಕೆರಳಿಸುವಂತದ್ದಾಗಿದೆ. ತಾವು ಇನ್ನು ಕೆಲವೇ ತಾಸು ಈ ಭೂಮಿಯ ಮೇಲಿರುತ್ತೇವೆ ಎಂದು ತಿಳಿದ ಜನರ ಕೃತ್ಯಗಳನ್ನು ಭಾವನೆಗಳನ್ನು ಕಥೆಗಳು, ನಾಟಕಗಳು, ಪುಸ್ತಕಗಳು, ಚಲನಚಿತ್ರಗಳು ಹೊರಹಾಕಲು ಪ್ರಯತ್ನಿಸಿವೆ. ಇನ್ನು ಇಪ್ಪತ್ನಾಲ್ಕು ಗಂಟೆಗಳ ಮುಂಚೆಯೇ ಯೇಸು ತಿರುಗಿ ಭೂಮಿಗೆ ಬರಲಿದ್ದಾನೆ ಮತ್ತು ಜಗತ್ತು ಇನ್ನು ಉಳಿಯದು ಎಂದು, ಹೇಳಲ್ಪಟ್ಟಾಗ, ಸಮಾಜವು ಎರಡು ಗುಂಪುಗಳಲ್ಲಿ ಒಡೆದು ಹೋಗುತ್ತದೆ, ಪ್ರತಿಯೊಂದು ಚರ್ಚ್ ಕಟ್ಟಡಗಳಲ್ಲಿ ಒಂದು ಗುಂಪು ತಾಳ್ಮೆ ಮತ್ತು ಪ್ರಾರ್ಥನೆಯಲ್ಲಿ ಸಮಯವನ್ನು ಕಳೆಯುವುದರಲ್ಲಿ ತುಂಬಿತುಳುಕಿದರೆ, ಮತ್ತೊಂದು ಗುಂಪು ತಮ್ಮ ಸಮಯವನ್ನು ಗದ್ದಲೆಬ್ಬಿಸುತ್ತಾ "ನಾಳೆ ನಾವು ಸಾಯುವುದರಿಂದ ತಿನ್ನಿರಿ ಕುಡಿಯಿರಿ" ಎಂದು ಹೇಳುತ್ತಾ ಜೀವಿಸುತ್ತಾರೆ (1 ಕೊರಿಂಥ 15:32).

ನಮಗೆ ಅಲ್ಪಸಮಯವು ಕೊಡಲ್ಪಟ್ಟಿದೆ ಎಂಬುದನ್ನು ಜ್ಞಾನ ಪೂರ್ವಕವಾಗಿ ಹೇಗೆ ಪ್ರತಿಕ್ರಿಯಿಸಬೇಕೆಂದು ನಾವು ಊಹಿಸಬಹುದಾಗಿದೆ. ಆದರೆ ಎಲೀಯನ ವಿಷಯದಲ್ಲಿ ನಾವು ಊಹಿಸಲಾರೆವು. ತಾನು ಬೇಗನೇ ತಾನು ಈ ಜಗತ್ತಿನಿಂದ ತೆಗೆಯಲ್ಪಡುತ್ತಿದ್ದೇನೆ ಎಂದು

ಎಲೀಯನು ತಿಳಿದವನಾಗಿದ್ದನು. ಈ ಅಧ್ಯಾಯವು "*ಯೆಹೋವನು ಎಲೀಯನನ್ನು ಸುಳಿಗಾಳಿಯ ಮುಖಾಂತರವಾಗಿ ಪರಲೋಕಕ್ಕೆ ಸೇರಿಸುವ ಸಮಯ ಬಂದಾಗ,* ಎಲೀಯನು ಎಲೀಷನೊಡನೆ ಗಿಲ್ಗಾಲನ್ನು ಬಿಟ್ಟು ಹೊರಟನು" (ವಚನ 1; ಒತ್ತಿ ಹೇಳಿದ್ದು ನನ್ನದು) ಎಂದು ಪ್ರಾರಂಭವಾಗುತ್ತದೆ. "ಎಲೀಯನು ಎಲೀಷನಿಗೆ *ನಾನು ನಿನ್ನ ಬಳಿಯಿಂದ ತೆಗೆಯಲ್ಪಡುವಾಗ* ನೀನು ನೋಡುವುದಾದರೆ ಅದು ನಿನಗೆ ದೊರಕುವದು" ಎಂದು ಹೇಳಿದನು (ವಚನ 10; ಒತ್ತಿ ಹೇಳಿದ್ದು ನನ್ನದು).

ಎಲೀಯನು ಹೇಗೆ ಇದು ಭೂಮಿಯ ಮೇಲೆ ತನ್ನ ಕೊನೆಯ ದಿನ ಎಂದು ಸಂಪೂರ್ಣ ವಾಗಿ ಅರಿವುಳ್ಳವನಾಗಿದ್ದನು ಎಂಬುದನ್ನು ನಾವು ನೋಡೋಣ. ಬಹುಶಃ ನಾವೂ ಸಹ ಹೀಗೆ ನಮ್ಮ ಭೂಮಿಯ ಮೇಲಿನ ಕೊನೆಯ ದಿನವನ್ನು ಹೇಗೆ ಕಳೆಯ ಬಹುದು ಎಂದು ನೋಡಬಹುದಾಗಿದೆ.

## ದೇವರ ಚಿತ್ತವನ್ನು ಮಾಡುತ್ತಾ ನಿನ್ನ ಕೊನೆಯ ದಿನವನ್ನು ಕಳೆ (2:1, 2)

> ಯೆಹೋವನು ಎಲೀಯನನ್ನು ಸುಳಿಗಾಳಿಯ ಮುಖಾಂತರವಾಗಿ ಪರಲೋಕಕ್ಕೆ ಸೇರಿಸುವ ಸಮಯವು ಬಂದಾಗ, ಎಲೀಯನು ಎಲೀಷನೊಡನೆ ಗಿಲ್ಗಾಲನ್ನು ಬಿಟ್ಟು ಹೊರಟನು. ಆಗ ಎಲೀಯನು ಎಲೀಷನಿಗೆ - ದಯವಿಟ್ಟು ನೀನು "ಇಲ್ಲೇ ಇರು; ಯೆಹೋವನು ನನಗೆ ಬೇತೇಲಿಗೆ ಹೋಗಬೇಕೆಂದು ಆಜ್ಞಾಪಿಸಿದ್ದಾನೆ" ಅನ್ನಲು ಎಲೀಷನು - "ಯೆಹೋವನಾಣೆ, ನಿನ್ನ ಜೀವದಾಣೆ, ನಾನು ನಿನ್ನನ್ನು ಬಿಟ್ಟುಹೋಗುವುದಿಲ್ಲ" ಎಂದು ಉತ್ತರಕೊಟ್ಟನು. ತರುವಾಯ ಅವರಿಬ್ಬರೂ ಬೇತೇಲಿಗೆ ಹೋದರು (ವಚನಗಳು 1, 2).

ನಾವು ಎಲೀಷನನ್ನು ಮೊದಲು ಭೇಟಿಯಾದಾಗ (1 ಅರಸು 17:1), ಆತನು ತನ್ನನ್ನು ತಾನು "ಕರ್ತನ ಮುಂದೆ ನಿಂತುಕೊಳ್ಳುವವನು, ಒಡೆಯನ ಕಾಯಕಕ್ಕೆ ಸಿದ್ಧನಾದವನೂ" ಎಂದು ಹೇಳಿಕೊಂಡಿದ್ದನು, ನಾವು ಎಲೀಯನನ್ನು "ಕರ್ತನ ವಾಕ್ಯವು ಆತನೆಡೆಗೆ ಬರುವುದನ್ನು" ನೋಡುತ್ತೇವೆ, ಮತ್ತು ಆತನು ಪದೇ ಪದೇ ಅದಕ್ಕೆ ಪ್ರತಿಕ್ರಿಯಿಸುತ್ತಾನೆ. ಈ ಕಥೆಯ ಆರಂಭದಲ್ಲಿ, ಎಲೀಯನು ಗಿಲ್ಗಾಲಿನಲ್ಲಿ ಇದ್ದನು, ಇದು ಯೆಹೋಶುವನಿಂದ ವಶಪಡಿಸಿಕೊಂಡ ಚಿರಪರಿಚಿತ ಸ್ಥಳವಾಗಿರಬಹುದು[1] ಮತ್ತು ದೇವರು ತಿರುಗಿ ಮಾತನಾಡಿದನು ಎಲೀಯನು "*ಯೆಹೋವನು ನನಗೆ* ಬೇತೇಲಿಗೆ ಹೋಗಬೇಕೆಂದು ಆಜ್ಞಾಪಿಸಿದ್ದಾನೆ" ಎಂದನು.

"ಹೀಗೆ ಅವರಿಬ್ಬರೂ ಬೇತೇಲಿಗೆ ಹೋದರು" (ವಚನ 2ಸಿ). ಇಲ್ಲಿ ಆತನ ಸ್ವಭಾವದ ಬಗೆಗಿನ ಒಂದು ಕೌತುಕಮಯವಾದ ವಿವರಣೆಯನ್ನು ನಾವು ಕಾಣುತ್ತೇವೆ. ವಚನ 1ರ ಪ್ರಕಾರ ಇವೆಲ್ಲವುಗಳು ಎಲೀಯನನ್ನು ಪರಲೊಕಕ್ಕೆ ತೆಗೆದುಕೊಂಡು ಹೋಗುವುದಕ್ಕೆ ನಡೆಸುವಂತವುಗಳು ಆಗಿವೆ. ನಾವು ವಚನ 8ರಿಂದ 11ರವರೆಗೆ ಎಲೀಯನನ್ನು "ತೆಗೆದುಕೊಂಡು ಹೋಗುವ" ಪ್ರಕ್ರಿಯೆಯು ಯೋರ್ಧನ ಹೊಳೆಯ ಪೂರ್ವದಲ್ಲಿ ಸಂಭವಿಸಿತು. ಹೇಗೋ, ಎಲೀಯನಿಗೆ ತನ್ನ ಅಂತಿಮವಾದ ಸ್ಥಳದ ಬಗೆಗೆ ಯಾವ ಸೂಚನೆಯೂ ಇರಲಿಲ್ಲ. ಆತನು ಕೇವಲ ದೇವರು ಹೇಳಿದ್ದಲ್ಲಿಗೆ ಹೋಗುವವನಾಗಿದ್ದನು, ಗಿಲ್ಗಾಲಿನಿಂದ ಬೇತೇಲು, ಬೇತೆಲಿನಿಂದ ಯೆರಿಕೋ, ಯರಿಕೋವನ್ನು ದಾಟಿ ಯೋರ್ದನ್ ಹೊಳೆಗೆ ಹೀಗೆ ಆತನು ಹೋದನು. ಇದು ಸುಮಾರಾಗಿ ವರ್ತ್ ಬಂದರಿಂದ ಓಕ್ಲಹೋಮಾ ಪಟ್ಟಣದ ಮಾರ್ಗವಾಗಿ ಆಸ್ಟಿನ್ ಪಟ್ಟಣ ಮತ್ತು ಕನಾಸ್ಸ್ ಪಟ್ಟಣಕ್ಕೆ ಹೋಗುವುದಕ್ಕೆ ಸಮಾನವಾಗಿತ್ತು.[2] ದೇವರು ಎಲೀಯನಿಗೆ ಬೇತೇಲಿಗೆ ಹೋಗಲು ಆಜ್ಞಾಪಿಸಿದನು, ಮತ್ತು ಆತನು ಅದರಂತೆ ಮಾಡಿದನು. ದೇವರು ಎಲೀಯನಿಗೆ ಯೆರಿಕೋವಿಗೆ ಹೋಗಲು ಆಜ್ಞಾಪಿಸಿದನು, ಮತ್ತು ಆತನು ಅದರಂತೆ

ಮಾಡಿದನು. ದೇವರು ಎಲೀಯನಿಗೆ ಯೋರ್ದನ ಹೊಳೆಯನ್ನು ದಾಟಲು ಆಜ್ಞಾಪಿಸಿದನು, ಮತ್ತು ಆತನು ಅದರಂತೆ ಮಾಡಿದನು. ದೇವರು ಎಲೀಯನಿಗೆ "ಪರಲೋಕಕ್ಕೆ ಹೋಗು" ಎಂದಾಗ ಆತನು ಹಾಗೆಯೇ ಮಾಡಿದನು. ಯಾವುದೇ ಪ್ರತಿವಾದ ವಿಲ್ಲದೇ, ಯಾವುದೇ ಗುಣಗುಟ್ಟುವಿಕೆಯಿಲ್ಲದೆ "ಕರ್ತನೇ ನೀನು ಏನು ಮಾಡು ಎಂದು ಹೇಳುತ್ತಿಯೋ ಅದನ್ನು ನಾನು ಮಾಡುವೆ. ನೀನು ನನ್ನನ್ನು ಎಲ್ಲಿಗೆ ಹೋಗಿಸಲು ಬಯಸುತ್ತಿಯೋ ಅಲ್ಲಿಗೆ ಹೋಗುವೆ" ಎಂಬ ರೀತಿಯು ನಮ್ಮಲ್ಲಿ ಎಲ್ಲರದ್ದಾಗಿರಬೇಕು.

ಎಲೀಯನು ಆ ದಿನವನ್ನು ಕರ್ತನ ಚಿತ್ತವನ್ನು ಮಾಡುವುದರಲ್ಲಿ ಕಳೆದನು. ಎಲೀಯನ ಕಡೆ ದಿನಗಳ ವಿವರಣೆಯು ಹನೋಕನ ಬಗೆಗಿನ ಮಾತುಗಳಿಂದಎರವಲು ಪಡೆದಂತವುಗಳಾಗಿವೆ: "(ಎಲೀಯನು) ದೇವರೊಂದಿಗೆ ಅನ್ಯೋನ್ಯವಾಗಿ ನಡೆದು ಕೊಳ್ಳುತ್ತಾ ಇರುವಾಗ ದೇವರು ಅವನನ್ನು ಕರೆದುಕೊಂಡಿದ್ದರಿಂದ ಕಾಣದೆ ಹೋದನು" (ಆದಿಕಾಂಡ 5:24).

## ನಿಮ್ಮ ಕೊನೆಯ ದಿನವನ್ನು ನಿಮ್ಮ ದೈವಿಕ ಸ್ನೇಹಿತರೊಡನೆ ಕಳೆಯಿರಿ (ವಚನ 2:1, 2)

ಇತ್ತೀಚಿನ ಒಂದು ಟಿವಿ ಕಾರ್ಯಕ್ರಮದಲ್ಲಿ, ಒಬ್ಬ ಮುಖ್ಯ ಪಾತ್ರಧಾರಿಯು "ನಾನು ಗಂಟಿನ ಹಿಂದೆ ಓಡುವುದನ್ನು ಹೆಚ್ಚಾಗಿ ಲಕ್ಷೀಕರಿಸುವುದಿಲ್ಲ" ಎಂದು ಹೇಳಿದನು. ಎಲೀಯನು ಅದರೊಡನೆ ಗುರುತಿಸಿಕೊಳ್ಳುವುದಿಲ್ಲ. ಆತನು ದೇವರ ಒಬ್ಬ ಮನುಷ್ಯನ ಸೈನ್ಯವಾಗಿದ್ದನು. (ಒನ್ ಮ್ಯಾನ್ ಆರ್ಮಿ) ಕರ್ಮೆಲ್ ಬೆಟ್ಟದಲ್ಲಿ ಬಾಳನ ಪ್ರವಾದಿಗಳ ಮುಂದೆ ಒಬ್ಬನೆ ನಿಂತುಕೊಂಡಿದ್ದನು. ಆತನು "ನಿನ್ನ ಪ್ರಯಾಣವು ಶೀಘ್ರವಾಗಬೇಕಾದರೆ, ನೀನು ಒಬ್ಬನೆ ಪ್ರಯಾಣಿಸು" ಎಂಬ ಸಿದ್ಧಾಂತವನ್ನು ನಂಬಿಕೊಂಡಿದ್ದನೆಂದು ನಾನು ಯೋಚಿಸುತ್ತೇನೆ.

ಅದಲ್ಲದೆ ಎಲೀಯನಿಗೆ ಒಬ್ಬ ಸ್ನೇಹಿತನ ಅವಶ್ಯಕತೆಯು ಇದೆ ಎಂದು ದೇವರು ತಿಳಿದಿದ್ದನು. ಎಲೀಯನು ಧೈರ್ಯಗೊಂಡಿದಾಗ ಆತನು "ನಾನೊಬ್ಬನೇ ಉಳಿದಿದ್ದೇನೆ" (1 ಅರಸು 18:22; 11:10, 14) ಎಂದು ಹೇಳಿದನು. "ಇದು ನಿಜವಲ್ಲ" ಎಂದು ದೇವರು ಹೇಳಿದನು. ನಂಬಿಗಸ್ತರಾದ ಇನ್ನೂ ಏಳನೂರು ಜನರು ಇದ್ದಾರೆ ಎಂದು ಆತನ ಸೂಚಿಸಿದನು, ಮತ್ತು ಎಲೀಷನೆಂಬ ಸಹಾಯಕನನ್ನು ಆತನಿಗೆ ಒಪ್ಪಿಸಿದನು (1 ಅರಸು 19:16-21). ಆ ವಿಷಯದಿಂದ, ಎಲೀಷನು ಎಲೀಯನ ಸೇವಕನಾಗಿ ಆತನೊಡನೆ ಪ್ರಯಾಣಿಸಿದನು,[3] ಆದರೆ ಆತನು ಸೇವಕನಿಗಿಂತಲೂ, ಹೆಚ್ಚಾಗಿ ಆತನು ಅವನಿಗೆ ಸ್ನೇಹಿತನಾಗಿದ್ದನು. ಬಹುಶಃ ಎಲೀಯನು ಇತರರು ಬಯಸುವ ಅಥವಾ ಅರ್ಥಮಾಡಿಕೊಳ್ಳುವ ವ್ಯಕ್ತಿತ್ವಹೊಂದಿದ ಮನುಷ್ಯನಾಗಿರಲಿಲ್ಲ. ಈ ಮನುಷ್ಯನಲ್ಲಿ ಇತರರು ಕಾಣದೆ ಇದ್ದಂತಹದ್ದು ಆವನಿಗೆ ಕಂಡಿತು, ಮತ್ತು ಆತನನ್ನು ಸ್ನೇಹಿತರಲ್ಲಿ ಒಬ್ಬನನ್ನಾಗಿ ಎಣಿಸಿದನು. ಎಲೀಯನು ತನ್ನ ಕೊನೆಯ ದಿನವನ್ನು ಎಲೀಷನ ಹತ್ತಿರವೇ ಕಳೆದನು.

ಈ ವಾಕ್ಯಕ್ಕನುಗುಣವಾಗಿ ಧ್ಯಾನಮಾಡುತ್ತಿರುವವರು "ಒಂದು ನಿಮಿಷ ತಡೆಯಿರಿ. ಎಲೀಯನು ಎಲೀಷನಿಂದ ಬಿಡುಗಡೆಯನ್ನು ಬಯಸಿದ್ದನಲ್ಲವೇ" ಎಂದು ಹೇಳಬಹುದು. ಇದು ಸತ್ಯ ಎಲೀಯನು ಎಲೀಷನಿಗೆ "ದಯವಿಟ್ಟು ಇಲ್ಲೇ (ಗಿಲ್ಗಾಲಿನಲ್ಲಿ) ಇರು; ನಾನು ಹೋಗುವೆ" ಎಂದನು. ಆಗ ಎಲೀಷನು "ಯೆಹೋವನಾಣೆ, ನಿನ್ನ ಜೀವದಾಣೆ, ನಾನು ನಿನ್ನನ್ನು ಬಿಟ್ಟು ಹೋಗುವುದಿಲ್ಲ" ಎಂದು ಉತ್ತರಕೊಟ್ಟನು (ವಚನ 2). ನಿಜವಾಗಿ ಈ ಅಧ್ಯಾಯದಲ್ಲಿ ಎಲೀಯನು ನಿಲ್ಲುವ ಪ್ರತಿಯೊಂದು ಸ್ಥಳದಲ್ಲಿ ಇದು ಸಂಭವಿಸಿದೆ.

ಪಂಡಿತರು ಈ ವಿಷಯವಾಗಿ ಬಲುವಾಗಿ ಹೋರಾಡಿದ್ದಾರೆ. ಎಲೀಯನು ಸರಿಯಾಗಿ ಏನನ್ನು ಸಾಧಿಸಲು ಪ್ರಯತ್ನಿಸುತ್ತಿದ್ದನು? ಮೊದಲ ನೋಟಕ್ಕೆ, ಎಲೀಯನಿಗೆ ಎಲೀಷನು ತನ್ನೊಡನೆ ಇರುವುದನ್ನು ಆತನು ಬಯಸುವವನಾಗಿರಲಿಲ್ಲ. ಕಥೆಯ ಅಂತ್ಯದಲ್ಲಿ, ಎಲೀಯನು

ಎಲೀಷನಿಗೆ ಆತನು ಅಲ್ಲಿರುವುದಕ್ಕಾಗಿ ಆತನಿಗೆ ಒಳಿತಾಗುತ್ತದೆ ಎಂದು ಆತನಿಗೆ ಹೇಳುತ್ತಾನೆ, ಇದು ಎಲೀಯನು ಕೇವ ಎಲೀಷನನ್ನು ಅಲ್ಲಿಂದ ಕಳುಹಿಸುವಂಥ ಪ್ರಯತ್ನವಾಗಿದೆ.

ಎಲೀಯನು ಬೀಳ್ಕೊಡುಗೆಗಳನ್ನು ದ್ವೇಷಿಸುತ್ತಿದ್ದನು ಎಂದು ಕೆಲವರು ಸೂಚಿಸುವವರಾಗಿದ್ದಾರೆ ನನ್ನ ಪತ್ನಿ ಜೋ, ಇದರೊಡನೆ ತನ್ನನ್ನು ಗುರುತಿಸಿಕೊಳ್ಳುತ್ತಾಳೆ. ಅವಳು "ಏರ್ ಪೋರ್ಟ್‌ಗೆ" ಹೋಗುವಾಗ ತನಗೆ ಗುಡ್ ಬಾಯ್ ಹೇಳಲು ಒಬ್ಬರಿಗಿಂತ ಹೆಚ್ಚು ಜನರು ಬರಬಾರದೆಂದು ಹೇಳಿದಳು. ಇತರರು ಸೂಚಿಸುವಂತೆ ಎಲೀಷನು ಈ ದಣುವಿನ ಪ್ರಯಾಣದಿಂದ ದೂರ ಉಳಿಯಬೇಕೆಂದು ಎಲೀಯನು ಬಯಸುವವನಾಗಿದ್ದನು ಎಂದು. ಅದು ನಿಜವಾದ ಸರಿಯಾದುದ್ದಲ್ಲ.

ನಾವು ಓದಿದ ಒಂದು ಉತ್ತಮವಾದ ಉತ್ತರವು ಎಲೀಯನು ಎಲೀಷನನ್ನು ಪರೀಕ್ಷಿಸುವವನಾಗಿದ್ದನು. ಇದಕ್ಕೆ ಸಮಾನವಾದ ಒಂದು ಪರೀಕ್ಷೆಯು ನಡೆದದ್ದು ನೊವೊಮಿಯು ರೂತಳಿಗೆ ಅವಳ ತವರಿನಲ್ಲಿ ಉಳಿಯಲು ಹೇಳಿದಾಗ (ರೂತಳು 1:11-13). "ನಿಮಗೆ ಗಂಡಂದಿರನ್ನು ಕೊಡಲು ನನಗೆ ಬೇರೆಗಂಡುಮಕ್ಕಳಿಲ್ಲ" ಎಂದು ಹೇಳಿದಳು. ಮತ್ತು ನೀವು ಈ ಅಪರಿಚಿತ ನೆಲದಲ್ಲಿ ಅಪರಿಚಿತರಾಗಿರುವಿರಿ ಎಂದು ನೊವೊಮಿಯು ಹೇಳಿದಳು. ಬಹುಶಃ ಎಲೀಯನ ಮಾತುಗಳು ಎಲೀಷನ ಸ್ನೇಹತ್ವವು ಎಷ್ಟು ಬಲಯುತವಾಗಿದೆ ಎಂಬುದನ್ನು ಪರಿಕ್ಷೀಸಿ ನೋಡುವುದೇ ಆಗಿತ್ತು. ಇದು ಒಂದು ವೇಳೆ ಪರಿಕ್ಷೆಯು ಆಗಿದ್ದರೆ, ಎಲೀಷನು ಅದನ್ನು ಒಳ್ಳೆಯ ರೀತಿಯಿಂದಲೇ ಎದುರಿಸಿದಂತಾಯಿತು. ಎಲೀಯನು ಆತನಿಗೆ "ದಯವಿಟ್ಟು ಇಲ್ಲೇ ಇರು" ಎಂದು ಹೇಳಿದಾಗ ಎಲೀಷನು ಆತನಿಗೆ "ಯೆಹೋವನಾಣೆ, ನಿನ್ನ ಜೀವದಾಣೆ, ನಾನು ನಿನ್ನನ್ನು ಬಿಟ್ಟು ಹೋಗುವುದಿಲ್ಲ" ಎಂದು ಹೇಳಿದನು. ಅಂದರೆ "ನೀನು ನನ್ನ ಇರುವಿಕೆಯನ್ನು ಬಯಸುವವನಾಗಿರು ಅಥವಾ ಬಯಸದಿರು, ನಿನಗೆ ನನ್ನ ಅವಷ್ಯಕತೆಯು ಇದ್ದೇ ಇದೆ. ನಿನ್ನ ಸ್ನೇಹಿತನಾದಂತಹ ನಾನು ನಿನ್ನನ್ನು ಬಿಡಲಾರೆನು" ಎಂದು ಅರ್ಥೈಸಬಹುದು.

ಸ್ನೇಹಿತರು ಅದ್ಭುತರಾಗಿರುತ್ತಾರೆ. "ಮನುಷ್ಯನು ಒಂಟಿಯಾಗಿರುವದು ಒಳ್ಳೆಯದಲ್ಲ" (ಆದಿಕಾಂಡ 2:18). ದೇವರಲ್ಲಿ ದಾವೀದನ ಕೈಯನ್ನು ಬಲಪಡಿಸಿದ ಯೋನಾತಾನನಂತೆ ಪ್ರೋತ್ಸಾಹಿಸುವ ಸ್ನೇಹಿತರ ಅವಶ್ಯಕತೆಯು ನಮಗೆ ಇದೆ (1 ಸಮುವೇಲ 23:16, ಅಕ್ಷರಶಃ ಸಹ ಎರವಲು ಪಡೆದಿದ್ದಾಗಿದೆ). ನಮ್ಮಲ್ಲಿ ಅನೇಕರು ಕರ್ತನಲ್ಲಿ ಹತ್ತಿರವಾದ ಸ್ನೇಹಿತರು ನಮಗೆ ನಮ್ಮ ಕುಟುಂಬದಲ್ಲಿಯೇ ಸಿಕ್ಕುತ್ತಾರೆ; ದೈವೀಕ ಪತ್ನಿ ಅಥವಾ ಪತಿ. ಕ್ರಿಸ್ತೀಯ ಪಾಲಕರು, ಮತ್ತು ಕ್ರಿಸ್ತೀಯ ಮಕ್ಕಳು. ಒಂದು ವೇಳೆ ಇದು ಭೂಮಿಯ ಮೇಲೆ ನಮ್ಮ ಕೊನೆಯ ದಿನ ಎಂದು ತಿಳಿದಿದ್ದಾದರೆ, ನಾವು ನಮ್ಮ ಆ ಸ್ನೇಹಿತರ ಜೊತೆಯಲ್ಲಿ ಕಳೆಯವುದಕ್ಕಿಂತ ಹೆಚ್ಚಿನ ಸಂತೋಷ ಬೇರೇನೂ ಇಲ್ಲ.

## ನಿಮ್ಮ ಕೊನೆಯ ದಿನವನ್ನು ಕರ್ತನ ಸೇವೆಯಲ್ಲಿ ಕಳೆಯಿರಿ (2:2-5)

ಎಲೀಯನ ಪ್ರಯಾಣವು ಮಗುವಿನ ದ್ರವ್ಯವನ್ನು ಹುಡುಕುವುದಕ್ಕೆ ಸಮಾನಾವಾಗಿತ್ತು. "ಆ ಕಪಾಟಿಗೆ ಹೋಗು" ಆತನು ಆ ಕಪಾಟಿಗೆ ಹೋದಾಗ, ಅಲ್ಲಿ ಒಂದು ಟಿಪ್ಪಣೆಯನ್ನು ಆತನು ಕಾಣುತ್ತಾನೆ "ಹತ್ತಿರದ್ದಕ್ಕೆ ಹೋಗು" ಎಂದು. ಆತನು ಹತ್ತಿರಕ್ಕೆ ಹೋದಾಗ ಅಲ್ಲಿ ಇನ್ನೊಂದು ಟಿಪ್ಪಣೆಯು ಹೇಳುತ್ತದೆ "ಹಾಸಿಗೆಯ ಕೆಳಗೆ ನೋಡು" ಎಂದು. ಈ ಉದ್ದವಾದ ಪ್ರಯಾಣವು ಯಾಕೆ? ಇದು ಯಾವುದಾದರೂ ಉದ್ದೇಶವನ್ನು ಹೊಂದಿದೆಯಾ, ಮತ್ತು ಹಾಗಿದ್ದದ್ದೇ ಆದರೆ ಆ ಉದ್ದೇಶವು ಏನು? ಇದಕ್ಕೆ ಉತ್ತರವು ಈ ಕೆಳಗಿನ ವಚನಗಳಲ್ಲಿ ನಾವು ಕಾಣಬಹುದು:

> ತರುವಾಯ ಅವರು ಬೇತೇಲಿಗೆ ಹೋದರು. ಬೇತೇಲಿನ ಪ್ರವಾದಿ ಮಂಡಲಿಯವರು ಎಲೀಷನನ್ನು ಎದುರುಗೊಂಡು ಅವನನ್ನು "ಯೆಹೋವನು ಈ ಹೊತ್ತು ನಿನ್ನ

> ಯಜಮಾನನನ್ನು ನಿನ್ನ ಬಳಿಯಿಂದ ಮೇಲಕ್ಕೆ ತೆಗೆದುಕೊಳ್ಳುವನೆಂಬುದು ನಿನಗೆ ಗೊತ್ತುಂಟೋ" ಎಂದು ಕೇಳಿದರು. ಅದಕ್ಕೆ ಅವನು - "ಗೊತ್ತುಂಟು ಸುಮ್ಮನಿರ್ರಿ" ಎಂದನು. ಎಲೀಯನು ಎಲೀಷನಿಗೆ - "ದಯವಿಟ್ಟು ಇಲ್ಲೇ ಇರು; ಯೆಹೋವನು ನನಗೆ ಯೆರಿಕೋವಿಗೆ ಹೋಗಬೇಕೆಂದು ಆಜ್ಞಾಪಿಸಿದ್ದಾನೆ" ಎಂದು ಹೇಳಿದನು. ಆದರೆ ಎಲೀಷನು "ಯೆಹೋವನಾಣೆ, ನಿನ್ನ ಜೀವದಾಣೆ, ನಾನು ನಿನ್ನನ್ನು ಬಿಟ್ಟುಹೋಗುವುದಿಲ್ಲ" ಎಂದು ಉತ್ತರಕೊಟ್ಟು ಅವನ ಜೊತೆಯಲ್ಲಿ ಯೆರಿಕೋವಿಗೆ ಹೋದನು. ಅಲ್ಲಿನ ಪ್ರವಾದಿ ಮಂಡಲಿಯವರು ಅವನನ್ನು ಎದುರುಗೊಂಡು - ಯೆಹೋವನು ಈ ಹೊತ್ತು ನಿನ್ನ ಯಜಮಾನನನ್ನು ನಿನ್ನ ಬಳಿಯಿಂದ ಮೇಲಕ್ಕೆ ಕರೆದುಕೊಳ್ಳುವನೆಂದು ನಿನಗೆ ಗೊತ್ತುಂಟೋ ಎಂದು ಕೇಳಿದರು. ಅದಕ್ಕೆ ಅವನು - "ಗೊತ್ತುಂಟು ಸುಮ್ಮನಿರ್ರಿ ಎಂದು ಉತ್ತರಕೊಟ್ಟನು" (ವಚನಗಳು 2ಬಿ-5).

ಈ ಪ್ರಯಾಣವು ಮಾಡಲ್ಪಟ್ಟದ್ದಕ್ಕೆ ಕಾರಣ, ಮತ್ತು ಭೇಟಿಕೊಟ್ಟಂತಹ ಸ್ಥಳಗಳು, ವಿಶೇಷ ಇತಿಹಾಸವನ್ನು ಮತ್ತು ನೆನಪನ್ನು ಹೊಂದಿವೆ ಎಂದು ಒಬ್ಬ ಪಂಡಿತನು ಅಭಿಪ್ರಾಯಪಡುತ್ತಾನೆ. ಈ ಮೂರು ಸ್ಥಳಗಳು ಐತಿಹಾಸಿಕ ಸ್ಥಳಗಳಾಗಿರುವದು ಇದು ನಿಶ್ಚತವಾಗಿಯೂ ನಿಜವಾಗಿದೆ; ಆರಂಭದ ಸ್ಥಳವಾದ ಗಿಲ್ಗಾಲು (ಬಹುಶಃ ಇದು ಯೆಹೋಶುವನಿಗೆ ಸಂಬಂಧಿತವಾಗಿರಬಹುದು). ಬೇತೇಲು ಇದರ ಅರ್ಥವು "ದೇವರ ಮನೆ" ಎಂದಾಗಿದ್ದು ಇದು ಯಜ್ಞವೇದಿಯ ಸ್ಥಳವಾಗಿದೆ. ಇದು ಅಬ್ರಹಾಮ ಮತ್ತು ಆತನ ಕುಟುಂಬದ ಇತರರು ಪದೇ ಪದೇ ಅಲ್ಲಿ ಕೂಡಿಬರುತ್ತಿದ್ದರು. ಯೆರಿಕೋ ಯೆಹೋಶುವ ಮತ್ತು ಆತನ ಕುಟುಂಬದ ಇತರರು ಪದೇ ಪದೇ ಅಲ್ಲಿ ಕೂಡಿ ಬರುತ್ತಿದ್ದರು. ಯೆರಿಕೋ ಯೆಹೋಶುವ ಮತ್ತು ದೇವರ ಜನರು ದೊಡ್ಡ ವಿಜಯವನ್ನು ಪಡೆದ ಪಟ್ಟಣವಾಗಿತ್ತು. ಹೇಗೋ ದೇವರು ಇಡೀ ದಿನ ಎಲೀಯನನ್ನು ನಡೆಯುವಂತೆ ಮಾಡಿದ್ದು ಕೇವಲ ನೆನಪುಗಳನ್ನು ಮರುಕಳಿಸುವಂತೆ ಮಾಡಿದ್ದು ಎಂಬುದರ ಬಗೆಗೆ ನನಗೆ ಸಂಶಯವಿದೆ. ಉತ್ತರವು ಬಲು ನಿಶ್ಚಿತವಾದುದಾಗಿದೆ: "ಈ ಪಟ್ಟಣಗಳು ಪ್ರವಾದಿಗಳ ಮಂಡಳಿಯನ್ನೂ ಸ್ಥಳವನ್ನು ಹೊಂದಿದ್ದವು. ನಾವು (ಸಜ್ಜಿನ ವಾಕ್ಯದ ಪದಪುಂಜವು "ಬೇತೆಲ ಸೆಮಿನರಿ" ಮತ್ತು ಯೆರಿಕೋ ಸೆಮಿನರಿ. ನಾವು ಅವುಗಳನ್ನು "ಬೇತೆಲ" [ಬೋಧಕರ ತರಬೇತಿ ಶಾಲೆ] ಮತ್ತು "ಯೆರಿಕೋ ಸೆಮಿನರಿ" ಎಂದು ಕರೆಯಬಹುದು.) ಮೋಶೆ ಯೆಹೋಶುವ ಮತ್ತು ಯೇಸು ಇವರು ತಾವು ಈ ಜಗತ್ತನ್ನು ಬಿಡುವ ಮುನ್ನ ತಮ್ಮ ಸಹಾಯಕರಿಗೆ ಅಧಿಕಾರವನ್ನು ಒಪ್ಪಿಸಿದಂತೆ ಎಲೀಯನು ಈ ಮಂಡಳಿಗಳಿಗೆ ಸಂಪೂರ್ಣ ಅಧಿಕಾರವನ್ನು ಕೊಡಲು ಭೇಟಿ ಇತ್ತಿದ್ದನು.

"ಪ್ರವಾದಿಗಳು" ಎಂಬ ವಿವರಣೆಯು ಈ ಎಲ್ಲಾ ಜನರ ತಂದೆಗಳು ಪ್ರವಾದಿಗಳಾಗಿದ್ದಾರೆ ಎಂಬ ಅರ್ಥವನ್ನು ಕೊಡುವುದಿಲ್ಲ. "ಮಕ್ಕಳಾದ" ಇದು ಹಿಬ್ರೂಯಿಸಂ ಆಗಿದ್ದು ಇದು "ಪಾಲುತೆಗೆದು ಕೊಳ್ಳುವ ಜನರುಗಳನ್ನು" ಸೂಚಿಸುವುದಾಗಿದೆ. ಇವುಗಳು ಪ್ರವಾದಿಗಳ ತರಬೇತುದಾರರು ಆಗಿದ್ದಾರೆ. ಇಂದು "ಪಾಲುತೆಗೆದುಕೊಳ್ಳುವ ಜನರುಗಳನ್ನು" ಸೂಚಿಸುವುದಾಗಿದೆ. ಇವರುಗಳು ಪ್ರವಾದಿಗಳ ತರಬೇತುದಾರರು ಆಗಿದ್ದಾರೆ. ಇಂದು ನಾವು ಅವರನ್ನು "ಬೋಧಕರ ತರಬೇತುದಾರರು" ಎಂದು ಹೇಳಬಹುದು.

ನಾವು ಈ ಮಂಡಲಿಗಳ ಬಗೆಗೆ ಮತ್ತು ಅವುಗಳೊಡನೆ ಎಲೀಯನ ಸಂಬಂಧದ ಬಗೆಗೆ ಹೆಚ್ಚಾಗಿ ತಿಳಿದಿದ್ದರೆ ಎಷ್ಟೊ ಒಳ್ಳೆಯದಿತ್ತೆಂದು ನಾನು ಆಶಿಸುವವನಾಗಿದ್ದೇನೆ. ಇದಕ್ಕೆ ಸಮಾನವಾದ ಮಂಡಲಿಗಳು ಸಮುವೇಲನ ದಿನದಲ್ಲಿ ಪ್ರಾರಂಭವಾಗಿದ್ದವು, ಆದರೆ ಎಲೀಯ ಮತ್ತು ಎಲೀಷರ ದಿನದಲ್ಲಿ ಕಂಡಂತವುಗಳು ಬಹಳ ವಿಸ್ತೃತವಾದವುಗಳು ಮತ್ತು ನಿರ್ದೇಶಿಸಿದನು ಎಂಬುದಾಗಿದೆ. ಇದು ನಿಜವಾಗಿರಬಹುದು ಎಲೀಷನು ಎಲೀಯನ ಸ್ಥಾನವನ್ನು ಪಡೆದನು, ಮತ್ತು ಎಲೀಷನು ಈ ಮಂಡಲಿಗಳೊಂದಿಗೆ ಹತ್ತಿರದ ಸಂಬಂಧವನ್ನು ಇರಿಸಿಕೊಂಡಿದ್ದನು (2 ಅರಸು 6:1; ಮುಂತಾದವು).

ಈ ಮಂಡಳಿಗಳಗೆ ಎಲೀಯನು ಕೊನೆಯ ಯಾತ್ರೆಯನ್ನು ಮಾಡಿದಾಗ ಅಲ್ಲಿ ಸರಿಯಾಗಿ ಏನು ಸಂಭವಿಸಿರಬೇಕೆಂಬುದನ್ನು ನಾನು ಸರಿಯಾಗಿ ಬಲ್ಲವನಾಗಿದ್ದೇನೆ. ಪ್ರತಿ ಸಮಯ ಪ್ರವಾದಿಗಳು ಹೊರಗೆ ಬಂದು ಎಲೀಷನನ್ನು ಕೇಳುತ್ತಿದ್ದರು. "ಯೆಹೋವನು ಈ ಹೊತ್ತು ನಿನ್ನ ಯಜಮಾನನನ್ನು ನಿನ್ನ ಬಳಿಯಿಂದ ಮೇಲಕ್ಕೆ ಕರೆದುಕೊಳ್ಳು ವವನೆಂದು ನಿನಗೆ ಗೊತ್ತುಂಟೋ" ಎಂದು ("ಈ ದಿನನಂತರ ಎಲೀಯನು ನಿನ್ನ ಬಳಿ ಇರುವುದಿಲ್ಲ ನಿನಗೆ ಮಾರ್ಗದರ್ಶನ ಮಾಡಲು ಇರುವುದಿಲ್ಲ"). ಪ್ರತಿಸಾರಿಯೂ ಎಲೀಷನು ಅವರಿಗೆ "ನನಗೆ ಗೊತ್ತುಂಟು ಸುಮ್ಮನಿರಿ" ಎಂದು ಹೇಳುತ್ತಿದ್ದನು. ಬಹುಶಃ ಎಲೀಷನು "ಎಲೀಯನ ಕೊನೆಯ ದಿನ ಇದು ಎಂದು ನಮಗೆಲ್ಲ ತಿಳಿದಿದೆ, ಆದರೆ ಅದು ಮಹತ್ವದ್ದಲ್ಲ. ಆತನು ನಿಮ್ಮ ಬಗೆಗೆ ಏನನ್ನು ಹೇಳಲಿಕ್ಕಿರುವನು ಎಂಬುದು ಮುಖ್ಯವಾದದ್ದು. ಆದ್ದರಿಂದ ಹೊರಗೆ ಹೋಗಿರಿ ಮತ್ತು ಕೇಳಿರಿ" ಎಂಬುದಾಗಿರಬಹುದು.[4]

ಎಲೀಯನು ಆ ಪ್ರವಾದಿ ತರಬೇತುದಾರರಿಗೆ ಏನನ್ನು ಹೇಳಿದನು? ಆತನು ಬಳಸಿದ್ದು ಮೋಶೆ ಅಥವಾ ಯೆಹೂಶುವನ ಅಥವಾ ಯೋಹಾನ 14-16ರಲ್ಲಿ ಯೇಸುವು ತನ್ನ ಶಿಷ್ಯರನ್ನು ಉದ್ದೇಶಿಸಿ ಮಾತನಾಡಿದ ಬೀಳ್ಕೊಡುಗೆ ಸಂದರ್ಭದಲ್ಲಿನ ಮಾತುಗಳಿಗೆ ಇದು ಸಮಾನವಾಗಿತ್ತು. ಬಹುಶಃ ಎಲೀಯನು ಈ ಪ್ರಾರ್ಥನೆಯೊಂದಿಗೆ ಮುಗಿಸಿರಬಹುದು:

> "ಇನ್ನು ನಾನು ಲೋಕದಲ್ಲಿ ಇರುವುದಿಲ್ಲ. ಇವರು ಲೋಕದಲ್ಲಿ ಇರುತ್ತಾರೆ, ನಾನು ನಿನ್ನ ಬಳಿಗೆ ಬರುತ್ತೇನೆ. ಪವಿತ್ರನಾದ ತಂದೆಯೇ, ನಾವು ಒಂದಾಗಿರುವ ಹಾಗೇ ಇವರೂ ಒಂದಾಗಿರಬೇಕೆಂದು ನೀನು ನನಗೆಕೊಟ್ಟ ನಿನ್ನ ಹೆಸರಿನಲ್ಲಿ ಇವರನ್ನು ಕಾಯಬೇಕು ..." (ಯೋಹಾನ 17:11).

ಪ್ರವಾದಿಯ ಮಂಡಳಿಗೆ ಎಲೀಯನ ಭೇಟಿಯ ಸರಿಯಾದ ಕಾರಣ ಏನೇ ಇರಲಿ, ಆತನು ಏನೇ ಹೇಳಿರಲಿ, ಒಂದು ಸಂಗತಿಯಂತೂ ನಿಶ್ಚಿತವಾದದ್ದಾಗಿದೆ: ಭೂಮಿಯ ಮೇಲಿನ ಎಲೀಯ ತನ್ನಕಡೆಯ ದಿನಗಳನ್ನು ದೇವರ ಕಾರ್ಯಮಾಡುವುದರಲ್ಲಿ ನಿರತನಾದನು!

ಅನೇಕ ವರ್ಷಗಳ ಹಿಂದೆ, ಇಂಗ್ಲೇಂಡಿನ ಒಬ್ಬ ಬೋಧಕನಿಗೆ ಆತನು ಆ ಪ್ರಶ್ನೆಯ ಬಗೆಗೆ ಕೆಲಕಾಲ ಯೋಚಿಸಿ, ನಂತರ ಉತ್ತರಿಸಿದನು. "ನಾನು ಬೆಳ್ಳಿಗ್ಗೆ 6 ಗಂಟೆಗೆ ಏಳುವೆನು, ಒಂದು ತಾಸು ಓದುವದು ಪ್ರಾರ್ಥನೆ ಮಾಡುವುದನ್ನು ಮಾಡುವೆನು, ನಂತರ ನನ್ನ ಮುಂಜಾನೆಯ ತಿಂಡಿಯನ್ನ ತಿನ್ನುವೆನು. ಮುಂಜಾನೆಯ ಅಭ್ಯಾಸದಲ್ಲಿ ತೊಡಗುವೆನು, ಲಘುವಾದ ಊಟವನ್ನು ಮಾಡುವೆನು, ಮಧ್ಯಾಹ್ನದ ಭೇಟಿಗಾಗಿ ಆಸ್ಪತ್ರೆಗಳಿಗೆ ಹೋಗುವೆನು. ರಾತ್ರಿ ಊಟವನ್ನು ಮಾಡುವೆನು ವಾರಮಧ್ಯದ ಆರಾಧನೆಗೆ ಹೋಗುವೆನು ಮನೆಗೆ ಬರುವೆನು, ಸ್ವಲ್ಪಚಹವನ್ನು ಸೇವಿಸುವೆನು, ಮತ್ತು ಹಾಸಿಗೆಗೆ ಹೋಗುವೆನು" ಎಂದು ಹೇಳಿದರು. ಇನ್ನೊಂದು ಮಾತಿನಲ್ಲಿ, ಆತನು *ದಿನಂಪ್ರತಿ* ಏನು ಮಾಡುತ್ತಿದ್ದನೋ ಅದನ್ನೆ ಮಾಡುತ್ತೇನೆ ಎಂದು ಹೇಳಿದನು.

ಇದು ಕರ್ತನ ಸೇವೆಯಲ್ಲಿ ಆತನ ಪ್ರತಿದಿನದ ಯೋಜನೆಯಾಗಿತ್ತು. ನಾವು ಯಾವುದನ್ನು ಮಾಡುತ್ತಿರಬೇಕೆಂದು ಆತನು ನಮಗೆ ಹೇಳುತ್ತಾನೋ ಅದನ್ನು ನಾವು ಮಾಡುವುದರಲ್ಲಿ ನಿರತರಾಗಿರಬೇಕೆಂದು ಆತನು ಬಯಸುವವನಾಗಿದ್ದಾನೆ.

## ಒಳ್ಳೇಯ ಪ್ರಭಾವವನ್ನು ಬೀರುವಂತೆ ನಿನ್ನ ಕಡೆಯ ದಿನವನ್ನು ಕಳೆ (2:2-10)

ಅನೇಕ ವ್ಯಕ್ತಿಗಳು, ಭೂಮಿಯ ಮೇಲೆ ತಮ್ಮ ಕೊನೆಯ ದಿನ ಎಂದು ತಿಳಿದಾಗ, ದಿನದ ಬಹುಭಾಗ ಸಡಿಲವಾದ ಎಳೆಗಳನ್ನು ಕಟ್ಟುವುದರಲ್ಲಿ ಕಾಲ ಕಳೆಯುವವರಾಗಿರುತ್ತಾರೆ. ಇತರ ಸಂಗತಿಗಳಲ್ಲಿ ಅವರು ಖಚಿತಪಡಿಸಿಕೊಳ್ಳುವುದನ್ನು ಪ್ರಯತ್ನಿಸುತ್ತಾರೆ, ತಾವು ಪ್ರಾಂಭಿಸಿದ ಒಳ್ಳೇಯ ಕಾರ್ಯಗಳನ್ನು ತಮಗೆ ಸಾಧ್ಯವಾದಷ್ಟು

ಸಂಪೂರ್ಣಗೊಳಿಸಲು ಪ್ರಯತ್ನಿಸುತ್ತಾರೆ ಎಲೀಯನೂ ಸಹ ಪ್ರವಾದಿಗಳ ಮಂಡಲಿಗೆ ಭೇಟಿ ಕೊಡುವುದರ ಮೂಲಕ ಮತ್ತು ಅಂತಿಮವಾಗಿ ತನ್ನ ಕಾರ್ಯವನ್ನು ಎಲೀಷನಿಗೆವಹಿಸು ಕೊಡುವ ಮೂಲಕ ಅದನ್ನು ಮಾಡಿದನು.

> ಎಲೀಯನು ತಿರುಗಿ ಅವನಿಗೆ - "ದಯವಿಟ್ಟು ನೀನು ಇಲ್ಲೇ ಇರು; ಯೆಹೋವನು ನನಗೆ ಯೋರ್ದನಿಗೆ ಹೋಗಬೇಕೆಂದು ಆಜ್ಞಾಪಿಸಿದ್ದಾನೆ" ಎಂದು ಹೇಳಿದನು. ಆಗ ಅವನು - "ಯೆಹೋವನಾಣೆ, ನಿನ್ನ ಜೀವದಾಣೆ, ನಾನು ನಿನ್ನನ್ನು ಬಿಟ್ಟು ಹೋಗುವುದಿಲ್ಲ" ಎಂದು ಉತ್ತರಕೊಟ್ಟನು; ಆದದರಿಂದ ಇಬ್ಬರೂ ಹೊರಟು ಯೋರ್ದನ್ ಹೊಳೆಯ ದಡಕ್ಕೆ ಬಂದರು.
>
> ಪ್ರವಾದಿಮಂಡಲಿಯವರಲ್ಲಿ ಐವತ್ತು ಜನರು ಇವರ ಹಿಂದಿನಿಂದಲೇ ಬಂದು ಸ್ವಲ್ಪ ದೂರದಲ್ಲಿ ನಿಂತುಕೊಂಡರು (ವಚನಗಳು 6, 7).

ಯೆರಿಕೋವಿನ "ಬೋಧಕರ ತರಬೇತಿ ಶಾಲೆಯಲ್ಲಿ" ಸುಮಾರು ಐವತ್ತು ಮಂದಿ ಇದ್ದರು - ಕೆಲಸವನ್ನು ಮಾಡಲು ಇದು ಒಳ್ಳೇಯ ಸಂಖ್ಯೆಯಾಗಿತ್ತು! ಈ ಐವತ್ತು ಜನರು ಏನು ಸಂಭವಿಸಬಹುದೆಂದು ನೋಡುಲು ಅವರಿಗೆ "ಎದುರಾಗಿ ಸ್ವಲ್ಪ ದೂರದಲ್ಲಿ ನಿಂತಿದ್ದರು." ಅನೇಕ ಎತ್ತರಮಯವಾದ ಸ್ಥಳಗಳು ಯೆರಿಕೋವಿನಲ್ಲಿ ಇದ್ದವು.

ಒಂದು ವೇಳೆ ಅವರು ಯಾವುದಾದರೂ ಒಂದು ಎತ್ತರವಾದ ಸ್ಥಳದಲ್ಲಿ ಇದ್ದದೇ ಆದರೆ, ಅವರು ಎಲೀಯ ಮತ್ತು ಎಲೀಷರಿಂದ ಅನೇಕ ಮೈಲಿದೂರದಲ್ಲಿ ಇರುತ್ತಿದ್ದರು.

> ಎಲೀಯನ ಜೀವಿತದ ಕೊನೆಯ ಹಂತದ ಕ್ಷಣಗಣನೆ ಮುಂದುವರೆದಂತೆ ಒಂದು ಆಕರ್ಷಣೀಯ ಸಂಗತಿಯು ನಡೆಯಿತು: ಆನಂತರ ಎಲೀಯನು ತನ್ನ ಕಂಬಳಿಯನ್ನು[5] ಮಡಚಿ ಅದರಿಂದ ನೀರನ್ನು ಹೊಡೆಯಲು ನೀರು ಎರಡು ಭಾಗವಾಯಿತು; ಇಬ್ಬರೂ ಒಣನೆಲದ ಮೇಲೆ ದಾಟಿಹೋದರು (ವಚನ 8).

ಎಲೀಯನು ತನ್ನ ಕಂಬಳಿಯನ್ನು ತೆಗೆದುಕೊಂಡನು ಅದನ್ನು ಕೋಲಿನಂತೆ ಸುತ್ತಿದನು, ಮತ್ತು ಅನೇಕ ವರ್ಷಗಳ ಹಿಂದೆ ಮೋಶೆಯು ಕೆಂಪು ಸಮುದ್ರದ ನೀರನ್ನು ಹೊಡೆದ ಹಾಗೆ ಈತನು ನೀರನ್ನು ಹೊಡೆದನು - ನೀರು ಇಬ್ಭಾಗವಾಯಿತು. ಇಬ್ಬರೂ ಮನುಷ್ಯರು ಆ ಒಣನೆಲದಲ್ಲಿ ಯೆಹೋಶುವ ಮತ್ತು ಆತನ ತಂಡವು ಬಲುಹಿಂದೆ ದಾಟಿಹೋದಂತೆ (ಯೆಹೋಶುವ 3:17)[6] ಇವರೂ ನಡೆದುಹೋದರು.

> ಅವರು ಆಚೇದಡಕ್ಕೆ ಸೇರಿದ ಮೇಲೆ ಎಲೀಯನು ಎಲೀಷನನ್ನು, "ನಿನ್ನನ್ನು ಬಿಟ್ಟು ಹೋಗುವ ಮೊದಲು ನಾನು ನಿನಗೋಸ್ಕರ ಏನು ಮಾಡಬೇಕನ್ನುತ್ತಿ ಹೇಳು" ಎಂದು ಕೇಳಿದನು. ಅದಕ್ಕೆ ಎಲೀಷನು, "ನಿನಗಿರುವ ಆತ್ಮದಲ್ಲಿ ನನಗೆ ಎರಡು ಪಾಲನ್ನು ಅನುಗ್ರಹಿಸು" ಎಂದು ಬೇಡಿಕೊಂಡನು (ವಚನ 9).

ಎಲೀಷನು ಎಲೀಯನ ಆತ್ಮದಲ್ಲಿ "ಎರಡು ಪಾಲನ್ನು" ಕೇಳುವಾಗ ಇದು ಆತನು ಎಲೀಯನು ಹೊಂದಿದ ಆತ್ಮದ ಶಕ್ತಿಯಲ್ಲಿ ಎರಡು ಪಟ್ಟು ಹೆಚ್ಚಿನ ಶಕ್ತಿಯನ್ನು ಆತನು ಕೇಳಿದದ್ದನ್ನು ಇದು ಧ್ವನಿಸುವುದಾಗಿದೆ. ಹೇಗೋ ನಮ್ಮ ಈ ಅಧ್ಯಾಯಗಳಲ್ಲಿ ಎಲೀಷನು ಎಲೀಯನಿಗಿಂತ ಎರಡುಪಟ್ಟು ಶಕ್ತಿಶಾಲಿಯಾಗಿದ್ದನು ಎಂಬ ಭಾವನೆಯನ್ನು ನಾವು ಇಲ್ಲಿ ಕಣಲಾರೆವು. ಎಲೀಷನು ಇಲ್ಲಿ ಎಲೀಯನ ಆತ್ಮೀಕ ಸಂತಾನ ಎಂದು ಪರಿಗಣಿಸಲ್ಪಡುತ್ತಾನೆ; ಅನುವಂಶಿಕವಾಗಿ ಹಿರಿಯ ಮಗನಿಗೆ "ಎರಡು ಪಾಲು" ಸಿಕ್ಕುವುದಾಗಿದೆ (ಧರ್ಮೋಪದೇಶ ಕಾಂಡ 21:17). ಎಲೀಷನು ಎಲೀಯನನ್ನು ಆತ್ಮೀಕ ತಂದೆ ಎಂದು ಪರಿಗಣಿಸಿದ್ದನು (ವಚನ 12).

"ಆಗ ಎಲೀಯನು ಅವನಿಗೆ - ನೀನು ದುರ್ಲಭವಾದದ್ದನ್ನು ಕೇಳಿಕೊಂಡಿ" (ವಚನ 10ಎ). ಇದು "ದುರ್ಲಭಲವಾದದ್ದು" ಯಾಕೆಂದರೆ ದೇವರು ಮಾತ್ರ ಈ ಕೋರಿಕೆಗೆ ಉತ್ತರವನ್ನು ನೀಡತಕ್ಕವನು; ವೈಯಕ್ತಿಕವಾಗಿ ಎಲೀಯನು ಅದನ್ನು ಮಾಡಲಾರನು. ಹೇಗೋ ಅಲ್ಲೊಂದು ಶರತ್ತಿದೆ "ಆದರೂ ನಾನು ನಿನ್ನ ಬಳಿಯಿಂದ ತೆಗೆಯಲ್ಪಡುವಾಗ ನೀನು ನನ್ನನ್ನು ನೋಡುವುದಾದರೆ ಅದು ದೊರಕುವದು: ಇಲ್ಲವಾದರೆ ದೊರಕುವುದಿಲ್ಲ" (ವಚನ 10ಬಿ). (ಎಲೀಯನು ಎಲೀಷನ ಜೊತೆಯಲ್ಲಿ ಇರುವಾಗ ಆತನು ತೆಗೆದುಕೊಳ್ಳಲ್ಪಟ್ಟನು, ಎಲೀಷನು ಆತನ ಮೇಲೆ ಎಲೀಯನ ಕಂಬಳಿಯು ಬಿದ್ದಂತೆ ಆತನು ಆ "ಎರಡು ಪಾಲನ್ನು" ಪಡೆದನು.)

ಎಲೀಯನು ತನ್ನ ಸೇವಾ ಜೀವಿತದಲ್ಲಿ ವಿಫಲನಾದನೇ ಅಥವಾ ಯಶಸ್ವಿಯಾದನೇ ಆತನು ಬಾಳನ ಆರಾಧನೆಯನ್ನು ನಿರ್ಮೂಲಮಾಡಲು ಕಳುಹಿಸಲ್ಪಟ್ಟನು. ಆತನು ಅದನ್ನು ಸಾಧಿಸದನೇ? ಆಹಾಬನು ಅವಹೇಳನಾತ್ಮಕವಾದ ಮರಣವನ್ನು ಹೊಂದದಿದಾಗ್ಯೂ, ಆತನ ಮಗನಾದ ಅಹಜ್ಯನು ಇನ್ನೂ ಬಾಳ್ಬೆಬೂಬನನ್ನು ವಿಚಾರಿಸುತ್ತಿದ್ದಾನೆ, ಬಾಳನ ಆರಾ ಧನೆಯು ಅಧ್ಯಾಯ 10ರ ವರೆಗೆ ಮುಂದುವರೆಯಿತು, ಯೇಹುವು ಎಲ್ಲಾ ವಿಗ್ರಹಾರಾಧಕರನ್ನೂ ಸಾಮೂಹಿಕವಾಗಿ ಕಗ್ಗೊಲೆ ಕೆಲಸಮಾಡಿದನು. ಎಲೀಯನು ವಿಫಲನಾದನೇ?

ಇಲ್ಲ, ಆತನು ವಿಫಲನಾಗಲಿಲ್ಲ! ಆತನು ಮೂರು ರೀತಿಗಳಲ್ಲಿ ಯಶಸ್ಸನ್ನು ಸಾಧಿಸಿದನು. (1) ಆತನು ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ದೇವರ ಚಿತ್ತದಂತೆ ಮಾಡಿದನು. ದೇವರು ಯಾವುದೇ ಮನುಷ್ಯನಿಂದ ಹೆಚ್ಚಿನದನ್ನು ಕೇಳುವುದಿಲ್ಲ. ("ದೇವರು ನಮ್ಮಲ್ಲಿರುವ ಉತ್ತಮವಾದದ್ದನ್ನು ಕೇಳುತ್ತಾನೆ ಅತ್ಯುತ್ತಮವಾದದ್ದನ್ನು ಅಲ್ಲ" ಎಂಬುದನ್ನು ನಾನು ಇತ್ತೀಚೆಗೆ ನೋಡಿದದ್ದನ್ನು ಮೆಚ್ಚುವವನಾಗಿದ್ದೇನೆ.)

(2) ಇದರ ಪ್ರಭಾವದ ಪರಿಣಾಮದಿಂದಾಗಿ ಬಾಳನ ಆರಾಧನೆಯು ಬಲುವಾಗಿ ನಿರ್ಭಂಧಕ್ಕೊಳಪಟ್ಟಿತು.[7] ಉತ್ತರ ಇಸ್ರೇಲಿನಲ್ಲಿದ್ದ ಯೆಹೋವನ ಪ್ರವಾದಿಗಳ ಮಂಡಲಿಯು ಎಲೀಯನು ಈ ದೃಶ್ಯಕ್ಕೆ ಬರುವ ಮುನ್ನ ಇರುವ ಸಾಧ್ಯತೆಯು ಇರಲಿಲ್ಲ. ಅಧ್ಯಾಯ 3ರಲ್ಲಿ ಇಸ್ರಾಯೇಲ್ಯರನ್ನು ಆಳಿದ ಮುಂದಿನ ಅರಸನು ದುಷ್ಟನಾಗಿದ್ದನು ಎಂದು ಓದುತ್ತೇವೆ "ತನ್ನ ತಂದೆಯು ಬಾಳನಿಗೋಸ್ಕರ ನಿಲ್ಲಿಸಿದ ಕಲ್ಲಿನ ಕಂಬವನ್ನು ತೆಗೆದುಹಾಕಿದನು" (ವಚನ 2).

(3) ಇದೆಲ್ಲಕ್ಕಿಂತ ಹೆಚ್ಚಾಗಿ ಆತನು ಸಿದ್ಧಪಡಿಸಲು ಸಹಾಯಿಸಿದವರನ್ನೂ, ಆತನು ಹೋದ ಮೇಲೆ ಆತನ ಕಾರ್ಯವನ್ನು ತೆಗೆದುಕೊಳ್ಳುವವರನ್ನೂ ಆತನು ಹಿಂದಕ್ಕೆ ಬಿಟ್ಟನು. ಎಲೀಯನನ್ನು ಬಿಟ್ಟರೆ ಅಲ್ಲಿ ಎಲೀಷನೂ ಇರಲಿಲ್ಲ ಮತ್ತು ಬಹಶಃ ಅಲ್ಲಿ ಪ್ರವಾದಿಗಳ ಮಂಡಲಿಯವರೂ ಇರಲಿಲ್ಲ.

ಎಲೀಯನ ಪ್ರಭಾವವು ಅನೇಕ ಸಮಯದವರೆಗೆ ಇತ್ತು.[8] ಮೆಸ್ಸೀಯನ ಮಾರ್ಗವನ್ನು ಸಿದ್ಧಮಾಡಲು ಬಂದವನಾದ ಮಲಾಕಿಯನು ತನ್ನನ್ನು ತಾನು "ಎಲೀಯ": ಎಂದು ಕರೆದುಕೊಳ್ಳುತ್ತಾನೆ. ಮಲಾಕಿಯನು ಸ್ನಾನಿಕನಾದ ಯೋಹಾನನು, ಎಲೀಯನ ಆತ್ಮದಿಂದ ಬಂದವನು ಎಂದು ಮಲಾಕಿಯನೂ ಸೂಚಿಸಿದನು (ಲೂಕ 1:17). ಯೇಸು ತನ್ನ ಪಾಪದ ಬಗೆಗಿನ ಅಸಹನೆಯಲ್ಲಿ, ಆತನು ಬೆಂಕಿಯ ಪ್ರವಾದಿಗಳ ಬಗೆಗೆ ನೆನಪಿಸಿದಾಗ ಕೆಲ ಜನರಿಗೆ ಆತನು ಎಲೀಯನು ತಿರುಗಿ ಅವತರಸಿ ಬಂದಿದ್ದಾನೆ ಎಂದು ಯೋಚಿಸಿದರು. ಯೇಸುವ ಪೌಲ ಮತ್ತು ಯಾಕೋಬರಂತೆ ಎಲೀಯನ ಜೀವನದ ಘಟನೆಗಳನ್ನು ಬಳಸಿ ಬೆಲೆಯುಳ್ಳ ಬೋಧನೆಗಳನ್ನು ಮಾಡಿದನು. ಯೇಸುವು ಮರಣಹೊಂದಿವಾಗ ಆತನು ಎಲೀಯನನ್ನು ಕರೆಯುತ್ತಾನೆ ಎಂದು ಜನರು ಭಾವಿಸಿದರು. ಇಂದಿಗೂ ಕೂಡಾ ಸಂಪ್ರದಾಯಸ್ಥ ಯೆಹೂದಿಗಳು ಪಂಚಾಶತ್ತಮದಿನದಂದು ಮತ್ತು ಸುನ್ನತಿಯ ಕಾರ್ಯಗಳಲ್ಲಿ ಎಲೀಯನಿಗಾಗಿ ಮೇಜಿನ ಮುಂದೆ ಒಂದು ಸ್ಥಳವನ್ನು ಬಿಟ್ಟಿರುತ್ತಾರೆ.[9]

ನಾವೆಲ್ಲ ಒಂದಲ್ಲಾ ಒಂದು ದಿನ ಈ ಜಗತ್ತನ್ನು ಬಿಡಲೇಬೇಕಾಗುವದು, ಮತ್ತು ಇದು

ಹೊಂದಿದ ಪರಿಣಾಮವನ್ನು ಗಣನೆಗೆ ತಂದುಕೊಳ್ಳುವ ಅವಶ್ಯಕತೆಯು ನಮಗಿದೆ. ಹೇಬೇಲನು ಸತ್ತಿದ್ದರೂ ಅವನ ನಂಬಿಕೆಯ ಮೂಲಕ ಆತನು ಇನ್ನೂ ಮಾತನಾಡುವವನಾಗಿರುತ್ತಾನೆ (ಇಬ್ರಿಯ 11:4). ಅನೇಕರು ತಾವು ಮರಣಹೊಂದುತ್ತೇವೆ ಎಂದು ತಿಳಿದೊಡನೆ (ನಿರಂತರವಾದ ಅನಾರೋಗ್ಯದಿಂದ ಮತ್ತು ಅಂಥ ಸಂಗತಿಗಳಿಂದ), ಈ ಸಂಗತಿಗೆ ಹೆಚ್ಚು ಯೋಚನೆಯನ್ನು ಹಾಕುತ್ತಾರೆ. ಅವರು ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳೊಡನೆ ಗಂಭೀರವಾಗಿ ಮಾತನಾಡುತ್ತಾರೆ (ನನ್ನ ಅಜ್ಜ ಡಾಕಸನು ಇದನ್ನು ಮಾಡಿದನು). ಕೆಲವರು ನಂತರದಲ್ಲಿ ಓದುವಂತಹ ಪತ್ರಗಳನ್ನು ಬರೆಯುತ್ತಾರೆ; ಇತರರು ಕ್ಯಾಸೆಟ್ ಅಥವಾ ವಿಡಿಯೋ ಟೇಪಗಳನ್ನು ಮಾಡುತ್ತಾರೆ. ಅವರ ಮನದಲ್ಲಿ ಕೆಲ ವ್ಯಕ್ತಿಗಳು ಇರುತ್ತಾರೆ, ಅವರಿಗೆ ಬೋಧಿಸಲು ಪ್ರಯತ್ನಿಸುತ್ತಾರೆ ಮತ್ತು ಅವರು ನಂಬಿಗಸ್ತ ಕ್ರೈಸ್ತರಾಗುವಂತೆ ಪ್ರೋತ್ಸಾಹಿಸುತ್ತಾರೆ. ಈಗಾಗಲೇ ಯಾರು ತಮ್ಮ ಮೃತ್ಯು ಪತ್ರವನ್ನು ಮಾಡಿಲ್ಲವೋ ಅದನ್ನು ಈಗ ಮಾಡಲಿ. ಕೆಲವು ಸೇವೆ ಅಂಶಗಳನ್ನು, ಕ್ರಿಸ್ತಿಯ ಶಾಲೆಗಳನ್ನು ಬೋಧಕರ ತರಬೇತಿ ಶಾಲೆಯು ಅವರ ಮೃತ್ಯು ಪತ್ರದಲ್ಲಿದ್ದು ಅವರು ಹೋದ ಮೇಲೆಯೂ ಇಂಥ ಸುವಾರ್ತೆಯು ಮುಂದುವರೆಯಬೇಕೆಂದು ಬಯಸುವವರಾಗಿರುತ್ತಾರೆ.

ಕೆಲವರ್ಷಗಳ ಹಿಂದೆ,[10] ಪೆಟಲಿಕಾದ ಆ್ಯನ್ ಹಾಲನಲ್ಲಿನ ನಾನು ಕ್ಯಾನ್ಸರ್‌ನಿಂದ ತೀರಿ ಹೋದ ಒಬ್ಬ ಯೌವನಸ್ಥ ತಾಯಿಯ ಶವಯಾತ್ರೆಗೆ ಹಾಜರಾಗಿದ್ದೆನು. ಪ್ಯಾಟಿ, ಮೂರು ತಿಂಗಳು ಅಸಹನೀಯವಾದ ನೋವಿನಿಂದ ಮತ್ತು ಅಂತ್ಯಕ್ಕೆ ಬಂದಂತೆ ಯಾವುದೆ ನೋವಿಲ್ಲದೆ ಇದ್ದಳು. ಆಕೆಯು ತನ್ನ ಕೊನೆಯ ದಿನಗಳಲ್ಲಿ ತನ್ನ ಮಕ್ಕಳಿಗೆ ಮರಣವು ಸಹಜವಾದದ್ದು ಮತ್ತು ತನ್ನ ಮರಣದ ಬಗೆಗೂ ಅವಳು ಅವರನ್ನು ಸಿದ್ಧಪಡಿಸುವುದರಲ್ಲಿ ತನ್ನ ಸಮಯವನ್ನು ಕಳೆದಳು.

ನಾಳೆಯೇ ನಮ್ಮ ಕೊನೆಯ ದಿನ ಎಂದು ನಾವು ತಿಳಿದಿದ್ದಾದರೆ ಇಂಥ ಚಟುವಟಿಕೆಗಳು ಅತೀ ಪ್ರಾಮುಖ್ಯವಾಗಿರುತ್ತವೆ. ಇವು ಮುಖ್ಯವಾದವುಗಳು ಆಗಿವೆ.

## ನೀನು ಪರಲೋಕಕ್ಕೆ ಹೋಗುತ್ತೀ ಎಂಬ ಭರವಸದೊಂದಿಗೆ ನಿನ್ನ ಕೊನೆಯ ದಿನವನ್ನು ಕಳೆ (2:11-18)

ಎಲೀಯನು ತನ್ನ ಕೊನೆಯ ದಿನಗಳ ಸಮಯದಲ್ಲಿ ಮಾಡಿದ ಕಾರ್ಯಗಳಿಂದಾಗಿ ಪರಲೋಕಕ್ಕೆ ಹೋಗಲಿಲ್ಲ, ಆದರೆ ಆತನ ಕೊನೆಯ ದಿನದ ಕಾರ್ಯಗಳು ಆತನು ಜೀವಿಸಿದ ಜೀವಿತವನ್ನು ವಿಸ್ತರಿಸಿದವು ಮತ್ತು ಮುಂದಿನ ವಾಕ್ಯಗಳನ್ನು ಚಿತ್ರಿತವಾದಂತೆ ಆತನನ್ನು ದೊಡ್ಡ ದೃಷ್ಯಕ್ಕಾಗಿ ಸಿದ್ಧಮಾಡಿತು:

"ಅವರು (ಎಲೀಯ ಮತ್ತು ಎಲೀಷ) ಮಾತನಾಡುತ್ತಾ ಮುಂದೆ ಹೋಗುತ್ತಿರುವಾಗ ..." (ವಚನ 11ಎ). ನನಗೆ ಈ ದೃಷ್ಯವು ಬಲು ಮೆಚ್ಚಿಕೆಯಾದದ್ದು: ಇಬ್ಬರು ಸ್ನೇಹಿತರು ಮಾತನಾಡುತ್ತಾ ನಡೆಯುತ್ತಿದ್ದಾರೆ. ಎಲೀಯನ ಜೀವನದ ಅದ್ಭುತವಾದ ಕೊನೆಯು ಆತನ ಜೀವಿತದಲ್ಲಿ ಈ ನಾಟಕೀಯ ಗಳಿಗೆಯು, ಆತನು ಪ್ರಾರ್ಥನೆಗಾಗಿ ಮೊಣಕಾಲೂರಿದಾಗ ಬರಲಿಲ್ಲ, ಆದರೆ ಆತನು ಎಲೀಷನ ಜೊತೆಯಲ್ಲಿ ಮಾತಾಡುತ್ತಾ ಇರುವಾಗ ಬಂದಿತು. ನಾವು ಬಹುಶಃ ನಾವು ಆರಾಧನೆಯನ್ನು ಮಾಡುತ್ತಿರುವಾಗ ಅಥವಾ ಕರ್ತನಿಗಾಗಿ ಶ್ರೇಷ್ಟ ಕಾರ್ಯವನ್ನು ಮಾಡುತ್ತಿರುವಾಗ ನಮ್ಮ ಜೀವಿತದ ಕೊನೆಯನ್ನು ಬಯಸುವವರಾಗಿರಬಹುದು, ಆದರೆ ನಾವು ಬಯಸಿದಂತೆ ಆಗುವ ಸಾಧ್ಯತೆಗಳು ಇಲ್ಲ. (ನಾವು ಯಾವಾಗಲೂ ಸಿದ್ಧರಾಗಿರಬೇಕೆಂದು ಇದು ಒತ್ತಿ ಹೇಳುತ್ತದೆ.)

"ಪಕ್ಕನೆ ಅಗ್ನಿಮಯವಾದ ರಥರಥಾಶ್ವಗಳು ನಡುವೆ ಬಂದು ಅವರನ್ನು ವಿಂಗಡಿಸಿದವು" (ವಚನ 11ಬಿ). ಕೆಲ ಪ್ರಾಚೀನ ಹಸ್ತಪ್ರತಿಯಲ್ಲಿ "ರಥ" (ಏಕವಚನ) ಎಂದಿದೆ; ಇತರವುಗಳಲ್ಲಿ

"ರಥಗಳು" (ಬಹುವಚನ) ಎಂದಿದೆ. ಇದು ಕೇವಲ ದೇವರ ಸೈನ್ಯವನ್ನು ವರ್ಣಿಸುವುದಾಗಿದೆ. 2 ಅರಸು 6:17ರಲ್ಲಿ, ಎಲೀಷನ ಸೇವಕನ ಕಣ್ಣುಗಳು ತೆರೆಯಲ್ಪಟ್ಟವು ಮತ್ತು ಆತನು ದೇವರ ಸೈನ್ಯವನ್ನು ನೋಡಿದನು, ನಾವು ಎಂಬುದಾಗಿ ನಾವು ಓದುತ್ತೇವೆ. "ಸುತ್ತಣ ಗುಡ್ಡಗಳಲ್ಲಿ ಬಂದು ನಿಂತಿದ್ದ ಅಗ್ನಿಮಯವಾದ ರಥರಥಾಶ್ವಗಳು ಆ ಸೇವಕನಿಗೆ ಕಂಡವು." ಈ ಕಥೆಯಲ್ಲಿ ಇರುವ "ರಥಗಳು" ದೇವರ ದೂತರವು ಆಗಿವೆ.[11] ಲೂಕ 16:22ರಲ್ಲಿ, ಲಾಜರನು ಸತ್ತಾಗ "ದೇವದೂತರು ಅವನನ್ನು ತೆಗೆದುಕೊಂಡು ಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು" ಎಂದಿದೆ. ಅಲ್ಲಿ ಸಂಭವಿಸಿದ್ದು ಇದೇ. ದೇವರ ಬೆಂಕಿಯ ಮನುಷ್ಯನು ಈ ಭೂಮಿಯನ್ನು ಬಿಡಲು ಸಿದ್ಧನಾಗಿದ್ದನು, ದೇವದೂತರು ಆತನನ್ನು ತೆಗೆದುಕೊಂಡು ಹೋಗಲು ಬಂದಿದ್ದರು!

"ಎಲೀಯನು ಸುಳಿಗಾಳಿಯ ಮುಖಾಂತರವಾಗಿ ಪರಲೋಕಕ್ಕೆ ಹೋದನು" (ವಚನ 11ಸಿ). ಇದು ಅವಶ್ಯವಾಗಿ ನಾವು ಹೇಳುವ ಬಿರುಗಾಳಿ ಅಲ್ಲ, ಆದರೆ ಇದು ಸುಳಿಗಾಳಿಯಾಗಿದೆ, ಬಿರುಸಿನ ಬಿರುಗಾಳಿ. ಧೂಳು ಹಾರುತ್ತಿತ್ತು, ಮತ್ತು ಎಲೀಯನು ಮೇಲೆ ಹೋದನು!

ಆಕಸ್ಮಿಕವಾಗಿ, "ಪರಲೋಕಕ್ಕೆ" ಇದು ದೈವಜ್ಞಾನದ ಹೇಳಿಕೆಯಾಗಿಲ್ಲ ಎಲೀಯನು ನೇರವಾಗಿ ನಿತ್ಯತ್ವದೆಡೆಗೆ ಪಾತಾಳಲೋಕವನ್ನು ದಾಟಿ, ನ್ಯಾಯತೀರ್ಪಿನ ದಿನವನ್ನು ಮುಂತಾದವನ್ನು ದಾಟಿ ಹೋದನು. ಎಲ್ಲರೂ ನೋಡುತ್ತಿದ್ದಂತೆ ಏರಿದ ಯೇಸುವಿನಂತೆ ಎಲೀಯನೂ ಕೂಡ ಏರಿಸಲ್ಪಟ್ಟನು ಎಂದು ಇದು ಸೂಚಿಸುವಾದಾಗಿದೆ ಕೆಲ ವಿಚಾರದಂತೆ, ಅದೇದಿನ ಎಲೀಯನು "ದೇವರ ಮುಂದೆ ನಿಂತುಕೊಳ್ಳುತ್ತಿದ್ದವನನ್ನು, ಯೆಹೋವನು ತನ್ನ ಸನ್ನಿಧಾನದಲ್ಲಿ ನಿಂತುಕೊಂಡು, ಭಲೆ ಮಗನೇ, ಒಳ್ಳೇಯ ನಂಬಿಗಸ್ತ ಸೇವಕ ನೀನು ಎಂದು ಸ್ವಾಗತಿಸಲು ನಿಂತಿರಬೇಕು"!

"ಎಲೀಷನು ಅದನ್ನು ನೋಡುತ್ತಾ - ನನ್ನ ತಂದೆಯೇ, ನನ್ನ ತಂದೆಯೇ ಇಸ್ರಾಯೇಲ್ಯರಿಗೆ ರಥರಥಾಶ್ವಗಳಾಗಿದ್ದವನೇ ಎಂದು ಕೂಗಿದನು. ಎಲೀಯನು ತನಗೆ ಕಾಣಿಸದೆ ಹೋದನು" (ವಚನ 12ಎ) ಎಲೀಷನು ತನ್ನ ಕಣ್ಣ ಮುಂದಿನ ದೃಶ್ಯಗಳನ್ನು ಸೂಚಿಸುತ್ತಾ ಇದ್ದಾನೆ ಎಂದು ನಾವು ಭಾವಿಸುವವರಾಗಿದ್ದೇವೆ, ಮುಂದೆ ನಾವು 13ನೇಯ ಅಧ್ಯಾಯದಲ್ಲಿ ತಿರುಗಿಕೊಂಡು ಎಲೀಷನ ಮರಣದ ಬಗೆಗೆ ನಾವು ಓದುತ್ತೇವೆ ಮತ್ತು ಅದೇ ರೀತಿಯ ಮಾತುಗಳು ಮಾತಾಡಲ್ಪಟ್ಟದ್ದನು ಕಾಣುತ್ತೇವೆ (ವಚನ 14).[12] ಅಲ್ಲಿ ಯಾವ ಬೆಂಕಿಯ ರಥಾಶ್ವಗಳ ದೃಶ್ಯಗಳು ಇಲ್ಲ. ಅಧ್ಯಾಯ 13, ದೇವರ ಪರಲೋಕದ ಸೈನ್ಯದ ಬಗೆಗೆ ಸೂಚಿಸುತ್ತಿಲ್ಲ, ಆದರೆ ಅದು ಎಲೀಷನಿಗೆ ಸಂಬಂಧಿತವಾಗಿದೆ. 2:12ರಲ್ಲಿ ಅವು ಎಲೀಯನನ್ನು ಸೂಚಿಸುತ್ತಿವೆಯೇ ಹೊರತು ಆತನ ಹೋಗುವ ಸಾಧನದ ಬಗೆಗೆ ಅಲ್ಲ. "ರಥಗಳು ಮತ್ತು ಇಸ್ರಾಯೇಲಿನ ಅಶ್ವಗಳು (ಅಥವಾ ಕುದುರೆ ಸವಾರನು)" ಇವು ದೇವರ ಸೈನ್ಯವನ್ನು ಸೂಚಿಸುವವಗಳಾಗಿವೆ. ಬಹಶಃ ಎಲೀಷನು, "ದೇವರ ಒಬ್ಬನೇ ಮನುಷ್ಯನ ಸೈನ್ಯವು (ಒನ್ ಮ್ಯಾನ್ ಆರ್ಮಿ) ಈಗ ಹೋಗುತ್ತಿದೆ, ನಾವು ಏನು ಮಾಡ ಬೇಕು?" ಎಂದು ಹೇಳುತ್ತಾನೆ.

"ಆಮೇಲೆ ತನ್ನ ಬಟ್ಟೆಗಳನ್ನು ಹರಿದು ಎರಡು ತುಂಡು ಮಾಡಿದನು" (ವಚನ 12ಬಿ). ಇದು ದೊಡ್ಡ ದುಃಖದ ಚಿಹ್ನೆಯಾಗಿದೆ. ಎಲೀಷನು ಅಲುಗಾಡಿಸಲ್ಪಟ್ಟನು.

"ಆನಂತರ ಅವನು ಮೇಲಣಿಂದ ಬಿದ್ದ ಎಲೀಯನ ಕಂಬಳಿಯನ್ನು ತೆಗೆದುಕೊಂಡು ಯೊರ್ದನ್ ನದಿ ತೀರಕ್ಕೆ ಬಂದನು" (ವಚನ 13). ಎಲ್ಲವೂ ಕಳೆದು ಹೋಯಿತೇ? "ಎಲೀಯನ ದೇವರಾದ ಯೆಹೋವನಲ್ಲಿ ಅಂದುಕೊಂಡನು?" (ವಚನ 14ಎ). ಆತನು "ಎಲೀಯನು ಎಲ್ಲಿ?" ಎಂದು ಕೇಳಲಿಲ್ಲ ಎಲೀಯನು ಎಲ್ಲಿದ್ದಾನೆಂಬುದು ಆತನಿಗೆ ತಿಳಿದಿತ್ತು. ಇಲ್ಲಿರುವ ಪ್ರಶ್ನೆಯು ಏನೆಂದರೆ "ಎಲೀಯನ ದೇವರಾದ ಯೆಹೋವನೆಲ್ಲಿ?" ಎಲೀಯನು ಹೋದ ಮೇಲೆ ನಮ್ಮೊಂದಿಗಿರುವುದನ್ನು ಮುಂದುವರೆಸುತ್ತಾನೋ ಎಂಬುದೇ ಆಗಿತ್ತು.

ದೇವರ ಶ್ರೇಷ್ಟ ಯೋಧನ ಸಾವಿನ ಅರ್ಥವುದೇವರು ಸತ್ತನು ಎಂದಲ್ಲ, ಆತನ ಸೇವಕನು ಸತ್ತನು ಎಂದೇ. ಎಲ್ಲಿಯವರೆಗೆ ಆ ಕಂಬಳಿಯನ್ನು ತೆಗೆದುಕೊಂಡು ಮುಂದೆ ಸಾಗುವ

ಜನರು ಇರುತ್ತಾರೋ ಅಲ್ಲಿಯವರೆಗೆ ದೇವರು ತನ್ನ ಕಾರ್ಯವನ್ನು ಮುಂದುವರೆಸುತ್ತಾನೆ! "ಆ ಕಂಬಳಿಯಿಂದ ನೀರನ್ನು ಹೊಡೆಯಲು ಅದು ಎರಡು ಭಾಗವಾಯಿತು; ಅವನು ಹೊಳೆಯನ್ನು ದಾಟಿಹೋದನು" (ವಚನ 14ಬಿ). ಹೌದು, ದೇವರು ಇನ್ನೂ ಕಾರ್ಯಮಾಡುತ್ತಿದ್ದಾನೆ. ಹೌದು ದೇವರು ಇನ್ನೂ ಜೀವಿಸುತ್ತಿದ್ದಾನೆ, ಮತ್ತು ಈಗ ಆತನು ಎಲೀಷನಲ್ಲಿ ಕಾರ್ಯೋನ್ಮುಖನಾಗಿದ್ದಾನೆ. ಎಲೀಷನ ಕಾರ್ಯವು ಮುಂದುವರೆಯಿತು.

> ದೂರದಲ್ಲಿ ನಿಂತಿದ್ದ ಯೆರಿಕೋವಿನ ಪ್ರವಾದಿಮಂಡಲಿಯವರು ಇದನ್ನು ಕಂಡು ಎಲೀಯನಿಗಿದ್ದ ಆತ್ಮವು ಎಲೀಷನ ಮೇಲೆ ಬಂದಿತೆಂದು ತಿಳಿದುಕೊಂಡು ಅವನನ್ನು ಎದುರುಗೊಂಡು ಅವನಿಗೆ ಸಾಷ್ಟಾಂಗ ನಮಸ್ಕಾರಮಾಡಿದರು (ವಚನ 15).

ಉಳಿದ ಕಥೆಯು ಎಲೀಯನ ದೇಹವನ್ನು ಹುಡುಕಲು ಪ್ರಯತ್ನಿಸಿ ಯಾವ ಮಾರ್ಗವನ್ನೂ ಕಾಣದಂತಹ ಪ್ರವಾದಿ ಮಂಡಲಿಯರ ಮೇಲೆ ಗಮನಹರಿಸುವುದಾಗಿದೆ (ವಚನಗಳು 16-18).

ಎಂಥ ಸೊಗಸಾದ ಮುಗಿಸುವಿಕೆ ಎಂಥ ಸೊಗಸಾದ ಜೀವಿತ!

ಬಹುಶಃ, "ಆದರೆ ಅದು ಕೇವಲ ಎಲೀಯನಿಗೆ ಮಾತ್ರ ಸೀಮಿತವಾಗಿಲ್ಲ. ಮರಣಹೊಂದದೇ ಇಬ್ಬರು ಜನರು ಈ ಭೂಮಿಯನ್ನು ಬಿಟ್ಟು ಹೋಗಿದ್ದಾರೆ. ನಿಸ್ಸಂಶಯವಾಗಿ ಅಸ್ಪಷ್ಟವಾದದ್ದು ನನಗೆ ವಿರೋಧವಾಗಿದೆ." ಇಂಥ ಅನುಭವಗಳು ನಿನಗೋಸ್ಕರ ಮತ್ತು ನನಗೋಸ್ಕರ ಸಾಧ್ಯತೆಗಳ ಸಾಮ್ರಾಜ್ಯದೊಂಗಿದ್ದರೆ - ಕೌತುಕ ವಾದವು ಇಷ್ಟು ಸಾಕು.

> ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನದೂತನ ಶಬ್ದದೊಡನೆಯೂ ದೇವರ ತುತೂರಿಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು; ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು ಆಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವುದಕ್ಕಾಗಿ ಅವರ ಸಂಗಡಲೇ ಮೇಘವಾಹನರಾಗಿ ಪಕ್ಕನೆ ಒಯ್ಯಲ್ಪಡುವೆವು: ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು (1 ಥೆಸ ಲೋನಿಕ 4:16, 17).

ಕ್ರಿಸ್ತನು ಬರುವಾಗ ನಾವು ಜೀವದಿಂದಿದದ್ದೇ ಆದರೆ, ನಾವು ಮಾರ್ಪಾಡುಗುವೆವು; ಆಗ ನಾವು ಎಂದಿಗೂ ಸಾಯದವರಾಗಿ ಕರ್ತನನ್ನು ಎದುರುಗೊಳ್ಳುವುದಕ್ಕಾಗಿ ಮೇಲಕ್ಕೇರಿಸಲ್ಪಡುವೆವು. ಒಂದು ವೇಳೆ ನಾವು ಈ ಮೊದಲೇ ಸತ್ತಿದ್ದರೂ ಕೂಡಾ, ಅದು ಕೂಡಾ ಮೈನವಿರೇಳಿಸುವಂತದ್ದೇ, ನಾವು ನಮ್ಮ ಹೊಸದೇಹದಿಂದ ಎಬ್ಬಿಸಲ್ಪಡುವೆವು ಮತ್ತು ಎಲೀಯನು ಮೇಲಕ್ಕೇರಿದಂತೆ ನಾವೂ ಮೇಲಕ್ಕೇರುವೆವು (1 ಕೊರಿಂಥ 15).

ಇದೆಲ್ಲದಕ್ಕೂ ಇರುವ ಒಂದೇ ರಹಸ್ಯವು ಭೂಮಿಯ ಮೇಲಿನ ನಮ್ಮ ಕೊನೆಯ ದಿನಕ್ಕಾಗಿ ಸಿದ್ಧನಾಗುತ್ತಾ ಇರು.

## ಮುಕ್ತಾಯ

"ಭೂಮಿಯ ಮೇಲಿನ ಕಡೆಯ ದಿನವನ್ನು ಹೇಗೆ ಕಳೆಯಬೇಕು" ಎಂಬುದಕ್ಕೆ ಕಡೆಯ ಐದು ಸಲಹೆಗಳನ್ನು ಪುನಃ ನೆನಪಿಸಿಕೊಳ್ಳುವಾ. ದೇವರ ಚಿತ್ತವನ್ನು ಮಾಡುವುದರಲ್ಲಿ ಕಳೆ. ಇದನ್ನು ನಿನ್ನ ಆತ್ಮೀಕ ಸ್ನೇಹಿತರೊಂದಿಗೆ ಕಳೆ. ದೇವರ ಸೇವೆಯನ್ನು ಮಾಡುವುದರಲ್ಲಿ ಕಳೆ. ನಿನ್ನ ಒಳ್ಳೇಯತನದ ಪ್ರಭಾವವು ಮುಂದುವರೆಯುವುದಕ್ಕಾಗಿ ಕಳೆ. ನೀನು ಪರಲೋಕಕ್ಕೆ ಹೋಗುವದು ಖಚಿತಮಾಡಿಕೊಳ್ಳುವುದರಲ್ಲಿ ಕಳೆ.

ಕೆಲವರು ಹೇಳುವುದೇನೆಂದರೆ, "ಕಡೆಯ ದಿನ ಯಾವಾಗ ಬರುತ್ತದೋ ನಾವರಿಯೆವು" ಎಂದು ಹೇಳಬಹುದು. ಅದು ನಿಜ. ಇದು ನಮ್ಮನ್ನು ಮುಖ್ಯವಾದ ಸಂಗತಿಗೆ ತರುವಂತದ್ದಾಗಿದೆ:

ಪ್ರತಿದಿನವನ್ನೂ ಭೂಮಿಯ ಮೇಲೆ ನಿನ್ನ ಜೀವನದ ಕೊನೆಯ ದಿನವೆಂದು ಕಳೆ. "ಹೀಗಿರುವುದರಿಂದ ನಿಮ್ಮ ಕರ್ತನು ಬರುವ ದಿನವು ನಿಮಗೆ ಗೊತ್ತಿಲ್ಲವಾದ್ದರಿಂದ ಎಚ್ಚರವಾಗಿರ್ರಿ" (ಮತ್ತಾಯ 24:42) ಎಂದು ಯೇಸು ಹೇಳುತ್ತಾನೆ.

ಕರ್ತನ ಬರುವಿಕೆಗಾಗಿ ನೀನು ಸಿದ್ಧವಾಗಿದ್ದೀಯಾ?

---

ಟಿಪ್ಪಣಿಗಳು

[1]ಇನ್ನೊಂದು ಸಾಧ್ಯತೆ ಎಂದರೆ ಪರ್ವತಗಳ ತಪ್ಪಲಲ್ಲಿರುವ ಆ ಹಳ್ಳಿಯ ಪರಿಚಯ ಇರುವ ಸಾಧ್ಯತೆಯು ಕಡಿಮೆ ಇದೆ. [2]ಎಲೀಯನು ನಡೆದಂತಹ ಸ್ಥಳದಲ್ಲಿ ನಾವು ಸವಾರಿಮಾಡಿದ್ದನ್ನು ನಾನು ಪರಿಗಣನೆಗೆ ತೆಗೆದುಕೊಳ್ಳುತ್ತಾ ಇದ್ದೇನೆ, ನಿನ್ನ ಕೇಳುಗರಿಗೆ ಪರಿಚಯವಿರುವ ಪಟ್ಟಣಗಳನ್ನು ಉದಾಹರಿಸಿ ಇನ್ನಷ್ಟು ವ್ಯಕ್ತಿಗತವಾಗಿ ಮಾಡು. [3]2 ಅರಸು 3:11ರಲ್ಲಿ, ಆತನು ಎಲೀಯನ ಕೈಯಿಂದ ನೀರನ್ನು ಅಭಿಷೇಕಿಸಿಕೊಂಡನು ಎಂದು ಕರೆದನು. [4]ಇತರೆ ಭಾಷಾಂತರಗಳಲ್ಲಿ "ನಿನ್ನ ಶಾಂತಿಯನ್ನು ಎತ್ತಿ ಹಿಡಿ" ಎಂದಿದೆ. ಇದು "ಬೇಸರಗೊಳ್ಳಬೇಡಾ ಅಥವಾ ಅಸ್ತವ್ಯಸ್ಥಗೊಳ್ಳದಿರು" ಎಂದರ್ಥವನ್ನು ಕೊಡಬಹುದು. [5]ಕಂಬಳಿಯು ಉದ್ದವಾದ ವಸ್ತ್ರವಾಗಿದ್ದು ಹೆಗಲ ಸುತ್ತಲೂ ಹಗುರವಾಗಿ ಹಾಕಿಕೊಳ್ಳುವಂತದ್ದು ಆಗಿತ್ತು ಸ್ಪೇಟುಗೆಂಟನಲ್ಲಿ "ಅದು ಕುರಿಚರ್ಮದ್ದು" ಎಂದಿದೆ. [6]ಅವರು ವಿರುದ್ಧ ದಿಕ್ಕಿನಲ್ಲಿ ಹೋಗವುದನ್ನು ಹೊರತುಪಡಿಸಿ. [7]ಮುಂದಿನ ಪಾಠದಲ್ಲಿ ಹೆಚ್ಚುವರಿ ದೃಷ್ಟಾಂತವನ್ನು ಕೊಡಲ್ಪಟ್ಟಿದೆ. [8]ಎಲೀಯನು ವಾಸಿಸುತ್ತಿದ್ದ ತನ್ನ ದಿನಗಳಲ್ಲಿನ ಪ್ರಭಾವವು ಎಂಬುದು ಲಿಖಿತ ಸಂದೇಶವು ಆಗಿದ್ದು ಬಹಶಃ ಇದು ಎಲೀಯನ ಮರಣಾಂತರ ಎಲೀಷನಿಂದ ಬಿಡುಗಡೆಮಾಡಲ್ಪಟ್ಟಿದ್ದು ಆಗಿರಬಹುದು (2 ಪೂರ್ವಕಾಲವೃತ್ತಾಂತ 21:12). ಈ ಸಂದೇಶಗಳ ಬಗೆಗೆ ನಾವು ಹೆಚ್ಚು ತಿಳಿಯಬೇಕೆಂದು ಬಯಸುವುದಾದರೆ - ಒಂದೇ ಉದಾಹರಣೆ ಎಂದರೆ ಎಲೀಯನು ತನ್ನ ಒಡೆಯನ ವಾಕ್ಯಗಳನ್ನು ಬರೆದು ತೆಗೆಯುತ್ತಿದ್ದನು. [9]ಎಲೀಯನು ಮರಣಹೊಂದದೇ ಹಾಗೆಯೇ ಪರಲೋಕಕ್ಕೆ ಸಾಗಿಸಲ್ಪಟ್ಟ ಕಾರಣದಿಂದ ಕೆಲ ಯೆಹೂದಿಗಳು, ಭೂಮಿಗೆ ಮರಳುವುದಕ್ಕೆ ಸಿದ್ಧವಾಗಿ ಗೂಢವಾದ ಜೀವಿತವನ್ನು ಪರಲೋಕದಲ್ಲಿ ಜೀವಿಸುತ್ತಿದ್ದಾರೆ ಎಂಬುದನ್ನು ಕಂಡನು, ಅವರು ಆತನು ಮೆಸ್ಸೀಯನು ಬರುವುದಕ್ಕಿಂತ ಮುಂಚೆ ಮಾಡುವವನು ಎಂದು ನಂಬಿದ್ದರು. ಮೆಸ್ಸೀಯನು ಈಗಾಗಲೇ ಬಂದಿದ್ದಾನೆ, ಆತನು ಎಲೀಯನು ಈಗಲೂ ಕೂಡಾ ಹೇಗೆ ಗೌರವಿಸಬೇಕೆಂದು ತೋರಿಸುತ್ತದೆ. [10]ಮಾರ್ಚ್ 7, 1986.

[11]ದೇವದೂತರು "ಉರಿಯುವ ಬೆಂಕಿಗೆ ಹೋಲಿಸಲ್ಪಟ್ಟದ್ದನ್ನು" ಕೀರ್ತನೆ 104:4ನ್ನು ನೋಡಿರಿ. [12]ಕೆಲವರು ಯೋಚಿಸುವುದೇನೆಂದರೆ ಕುದುರೆಗಳು ಮತ್ತು ರಥಗಳು ಅದೃಷ್ಟವಾ ದಂತವುಗಳು. ಅವುಗಳು ಇದ್ದರೂ ಕೂಡಾ, ಅಲ್ಲಿ ಎಲೀಷನನ್ನು ನೋಡಲು ಒಳ್ಳೇಯ ಅವಕಾಶವು ಇತ್ತು (ಗಮನಿಸಿರಿ 2 ಅರಸು 6:16, 17).

---

## ಪಾಠದ ರೂಪರೇಶೆ

**ಪೀಠಿಕೆ**

A. ಒಂದು ಬಲು ಮುಖ್ಯವಾದ ನಾಟಕೀಯ ಸಮಾರೋಪವು ಯಾರ ಜೀವನದಲ್ಲಿ ಕಂಡದ್ದಾದರೆ ಅದು 2 ಅರಸು 2ರಲ್ಲಿ ಸಿಕ್ಕುತ್ತದೆ. ಜಗತ್ತಿನ ಇತಿಹಾಸದಲ್ಲಿ ಇಬ್ಬರು ವ್ಯಕ್ತಿಗಳು ಸಾಯದೆ ನೇರವಾಗಿ ಪರಲೋಕಕ್ಕೆ ಹೋದರು: ಹನೋಕ (ಆದಿಕಾಂಡ 5) ಮತ್ತು ಎಲೀಯ (2 ಅರಸು 2).

B. "ಭೂಮಿಯ ಮೇಲೆ ನಮ್ಮ ಕೊನೆಯ ದಿನವನ್ನು ಹೇಗೆ ಕಳೆಯಬೇಕು" ಎಂಬುದನ್ನು ನಾವು ಪರಿಗಣಿಸುವವರಾಗಿದ್ದೇವೆ ಯಾಕೆಂದರೆ 2 ಅರಸು 2ರಲ್ಲಿ ಎಲೀಯನು ತನ್ನ ಕೊನೆಯ ದಿನಗಳನ್ನು ಹೇಗೆ ಕಳೆದನು ಎಂಬುದು ನಮಗೆ ಹೇಳಲ್ಪಟ್ಟಿದೆ.

I. ದೇವರ ಚಿತ್ತವನ್ನು ಮಾಡುತ್ತಾ ನಿನ್ನ ಕೊನೆಯ ದಿನವನ್ನು ಕಳೆ (2:1, 2).

A. ನಿಜಕ್ಕೂ ಎಲೀಯನಿಗೆ ಆ ದಿನದಲ್ಲಿನ ತನ್ನ ಅಂತಿಮದ ಗುರಿಯನ್ನು

ತಿಳಿದಿರಲಿಲ್ಲ. ಬದಲಾಗಿ ಆತನು ಯಾವಾಗಲೂ ದೇವರು ಎಲ್ಲಿಗೆ ಹೋಗಲು ಹೇಳಿದನೋ ಅಲ್ಲಿಗೆ ಹೋದನು, ಏನು ಮಾಡಲು ದೇವರು ಬಯಸಿದನೋ ಅದನ್ನೇ ಮಾಡಿದನು. ದೇವರ ಚಿತ್ತದಂತೆ ಆತನು ಜೀವಿಸಿದನು ಮತ್ತು ತನ್ನ ಜೀವಿತವನ್ನು ಕೊನೆಗೊಳಿಸಿದನು.

B. ಎಂತಹ ಅದ್ಭುತವಾದ ಉದಾಹರಣೆಯಾಗಿದೆ!

II. ನಿನ್ನ ಕೊನೆಯ ದಿನವನ್ನು ನಿನ್ನ ಆತ್ಮೀಕ ಗೆಳೆಯರೊಂದಿಗೆ ಕಳೆ (2:1, 2).

A. ಎಲೀಯನು "ಒಂಟಿಯಾದನು" ಆತನಿಗೆ ಸ್ನೇಹಿತನ ಅವಶ್ಯಕತೆಯು ಇದೆ ಎಂದು ದೇವರು ತಿಳಿದನು ಹೀಗೆ ಆತನು ಎಲೀಷನನ್ನು ಆತನಿಗೆ ಸ್ನೇಹಿತನನ್ನಾಗಿ ಕೊಟ್ಟನು. ಎಲೀಷನು ಆತನ ಜೊತೆ ಯಾವಾಗಲೂ ಇರುತ್ತಿದ್ದನು.

B. ಸ್ನೇಹಿತರು ಅದ್ಭುತವಾಗಿರುತ್ತಾರೆ (ಆದಿಕಾಂಡ 2:18; 1 ಸಮುವೇಲ 23:16). ಒಂದು ವೇಳೆ ಇದು ಭೂಮಿಯ ಮೇಲೆ ನಮ್ಮ ಕೊನೆಯ ದಿನವಾಗಿದ್ದರೆ ಆದಿನವನ್ನು ನಾವು ನಮ್ಮನ್ನು ಪ್ರೀತಿಸುವವರ ಜೊತೆಯಲ್ಲಿ ಕಳೆಯಲು ಬಯಸುತ್ತೇವೆ, ವಿಶೇಷವಾಗಿ ನಮಗೆ ಉತ್ತಮ ಕ್ರೈಸ್ತರಾಗಲು ಸಹಾಯಿಸಿದವರ ಮಧ್ಯದಲ್ಲಿ.

III. ದೇವರ ಸೇವೆಮಾಡುತ್ತಾ ನಿನ್ನ ಕೊನೆಯ ದಿನವನ್ನು ಕಳೆ (2:2-5).

A. ಎಲೀಷನು ಮಾಡಿದ ಸುದೀರ್ಘವಾದ ಪ್ರಯಾಣಕ್ಕೆ ಯಾವುದಾದರೂ ಉದ್ದೇಶವು ಇತ್ತಾ? ಬೇತೇಲು ಮತ್ತು ಯೆರಿಕೋವಿನ ಪ್ರವಾದಿ ಮಂಡಲಿಗಳಿಗೆ ಅವನು ಭೇಟಿ ಇಡುವ ಉದ್ದೇಶವನ್ನು ಮೇಲಿನ ತನ್ನ ಕಡೆಯ ದಿನಗಳನ್ನು ದೇವರ ಕಾರ್ಯಮಾಡುವುದರಲ್ಲಿ ಕಳೆದನು!

B. ದೇವರ ಸೇವೆಯಲ್ಲಿ ನಿರತರಾಗಿರುವದು ನಮಗೆ ಅವಶ್ಯವಾಗಿದೆ.

IV. ಒಳ್ಳೆಯ ಪ್ರಭಾವವನ್ನು ಬೀರುವಂತೆ ನಿನ್ನ ಕಡೆಯ ದಿನವನ್ನು ಕಳೆ (2:2-10).

A. ಎಲೀಯನು ಪ್ರವಾದಿ ಮಂಡಲಿಗಳಿಗೆ ಭೇಟಿ ಇತ್ತನು ಮತ್ತು ಅಂತಿಮವಾಗಿ ತನ್ನ ಕೆಲಸವನ್ನು ಎಲೀಷನಿಗೆ ಕೊಟ್ಟನು, ಆತನು (ಕರ್ತನ ಮಾರ್ಗದರ್ಶನದೆಡೆಯಲ್ಲಿ) ಭೂಮಿಯ ಮೇಲೆ ಖಚಿತವಾದ ಪ್ರಭಾವವನ್ನು ಬೀರಿದನು.

1. ಎಲೀಯನು ಮಂಡಲಿಗಳಿಗೆ ಭೇಟಿ ಇತ್ತ ಮೇಲೆ, ಆತನು ಮತ್ತು ಎಲೀಷ ಯೋರ್ಧನ್ ಹೊಳೆಯನ್ನು ದಾಟಿದರು.

   a. ಎಲೀಯನ ಕಂಬಳಿಯು ನೀರನ್ನು ವಿಭಾಗಿಸಿತು ಮತ್ತು ಅವರು ಒಣನೆಲದಲ್ಲಿ ಹಾದುಹೋದರು (ವಚನ 8).

   b. ಎಲೀಷನು ಎಲೀಯನ ಆತ್ಮದಲ್ಲಿ "ಎರಡು ಪಾಲನ್ನು" ಕೇಳಿ ದನು. ಬಹುಶಃ ಈ ಭಿನ್ನಹವು ಎಲೀಯನ ಆತ್ಮೀಕ ಆಸ್ತಿಯನ್ನು ಪರಿಗಣಿಸುವುದಾಗಿದೆ (ಧರ್ಮೋಪದೇಶಕಾಂಡ 21:17).

2. ಎಲೀಯನು ತನ್ನ ಸೇವಾಕಾರ್ಯದಲ್ಲಿ ಯಶಸ್ವಿಯಾದನೇ ಅಥವಾ ವಿಫಲನಾದನೇ?

   a. ಆತನು ಬಾಳನ ಆರಾಧನೆಯನ್ನು ತೆಗೆದುಹಾಕಲಿಲ್ಲ, ಆದರೆ ಆತನು ವಿಫಲನಾಗಲಿಲ್ಲ.

      (1) ಆತನು ತನ್ನ ಸಾಮರ್ಥ್ಯವನ್ನು ಮೀರಿದೇವರ ಚಿತ್ತವನ್ನು ಮಾಡಿದನು. ದೇವರು ಇನ್ನು ಹೆಚ್ಚು ಬೇಡ ಎಂದು ಹೇಳಿದನು.

      (2) ಆತನ ಶ್ರಮದ ಪರಿಣಾಮವು, ಬಾಳನ ಆರಾಧನೆಯು

ಬಹುವಾಗಿ ತಡೆಯಲ್ಪಟ್ಟಿತು (ಗಮನಿಸಿರಿ 2 ಅರಸು 3:2).

(3) ಆತನು ತನ್ನ ಕಾರ್ಯವನ್ನು ಮಾಡಲು ಸಹಾಯಿಸಿದವರನ್ನೂ, ಮತ್ತು ಕಾರ್ಯವನ್ನು ಮುಂದುವರೆಸುವವರನ್ನೂ ಬಿಟ್ಟು ಹೋದನು.

b. ಎಲೀಯನ ಪ್ರಭಾವವು ಆತನ ಜೀವಿತದ ಕೊನೆಯವರೆಗೂ ಉಳಿಯುತ್ತದೆ.

B. ನಮ್ಮಲ್ಲಿ ಪ್ರತಿಯೊಬ್ಬರೂ ಈ ಲೋಕವನ್ನು ಬಿಡಲೇಬೇಕು. ನಾವು ಯಾವ ಪ್ರಭಾವವನ್ನು ಬಿಟ್ಟುಹೋಗುತ್ತೇವೆಯೋ ಅದನ್ನು ಗಮನಿಸುವದು ಅವಶ್ಯ.

V. ನೀನು ಪರಲೋಕಕ್ಕೆ ಹೋಗುತ್ತಿ ಎಂಬ ಭರವಸದೊಂದಿಗೆ ನಿನ್ನ ಕೊನೆಯ ದಿನವನ್ನು ಕಳೆ (2:11-18).

A. ಕೊನೆಯ ದಿನದಲ್ಲಿನ ಎಲೀಯನ ಕಾರ್ಯಗಳು ಆತನ ಜೀವಿತವನ್ನು ವಿಸ್ತೃತಗೊಳಿಸಿದವು ಮತ್ತು ಸುಳಿಗಾಳಿಯಲ್ಲಿ ಪರಲೋಕಕ್ಕೆ ಮೇಲೆರುವ ಆತನ ಜೀವಿತದ ಅತ್ಯುಚ್ಚ ಫಳಿಗೆಗಾಗಿ ಅವನನ್ನು ಸಿದ್ಧಪಡಿಸಿದವು.

B. ಇಂಥ ಸನ್ನಿವೇಶಗಳು ಕ್ರಿಸ್ತನು ನಾವು ಸಾಯುವ ಮುನ್ನ ತಿರುಗಿ ಬಂದದ್ದಾದರೆ ಮತ್ತು ನಾವು ಸಿದ್ಧವಾಗಿರದ್ದರ (1 ಥೆಸೋನಿಕ 4:16, 17) ನಾವೂ ಇಂಥ ಸಂಗತಿಗಳನ್ನು ಹೊಂದಬಹುದು! ಮತ್ತು ನಾವು ಸಿದ್ಧರಾಗಿರುವುದಾಗಿದ್ದರೆ ಇಂಥ ನಾಟಕೀಯ ಅಂತ್ಯವು ನಮಗಾಗಲು ಸಾಧ್ಯ ಒಂದು ವೇಳೆ ಕ್ರಿಸ್ತನ ಬರೋಣಕ್ಕಿಂತ ಮೊದಲೇ ನಾವು ಸತ್ತಿದ್ದರೆ ಮುಂದಿನ ಘಟನೆಯು ಮೈನೆವರೇಳಿಸುವಂತದ್ದಾಗಿರುತ್ತದೆ (1 ಕೊರಿಂಥ 15)!

**ಮುಕ್ತಾಯ**

A. ಒಬ್ಬನು ಹೀಗೆ ಹೇಳಬಹುದು "ಕಡೆಯ ದಿನ ಯಾವಾಗ ಬರುತ್ತದೋ ನಾನು ಅರಿಯೆನು" ಎಂದು ಹೇಳಬಹುದು. ಪ್ರತಿದಿನವು ನಮ್ಮ ಕೊನೆಯ ದಿವಸ ಎಂದು ಕಳೆಯಬೇಕು (ಮತ್ತಾಯ 24:42) ಪ್ರತಿ ದಿನವನ್ನೂ ಭೂಮಿಯ ಮೇಲೆ ನಿನ್ನ ಜೀವನದ ಕೊನೆಯ ದಿನವೆಂದು ಕಳೆಯಬೇಕು.

B. ಕರ್ತನ ಬರುವಿಕೆಗಾಗಿ ನೀನು ಸಿದ್ಧವಾಗಿದ್ದೀಯಾ? ಅಥವಾ ಮರಣಕ್ಕಾಗಿಯಾ?